Mr. SPEAKER.—It is not rule 40. Rule 40 refers to adjournment motions. To which rule is the Hon'ble Member referring ?

Sri C. J. MUCKANNAPPA.—Even then, except adjournment motions the business of the House cannot be interrupted. Now the Deputy Minister for Education is just introducing two Bills. They are not included in the business for the day. I feel and apprehend it is not in order to introduce these Bills at this stage. I request the Chair to give a ruling whether the introduction of these Bills will be in order.

4 P.M.

Mr. SPEAKER.—I have already given a ruling. This question arose prior to this and I have already said that this has been included in the Order of the Day specially by issuing an additional agenda. The additional agenda can be added and this is within my power to do so and I have done it. The point of order on such matters should not have been raised, because this matter was raised and has already been decided.

KARNATAKA UNIVERSITY (SECOND AMENDMENT) BILL, 1957.

Introduction.

Smt. GRACE TUCKER (Deputy Minister for Education).—Sir, I introduce the Karnataka University (Second Amendment) Bill, 1957. It has been published in the *Mysore Gazette* under rule 48 of the Rules of Procedure and Conduct of Business in the Mysore Legislative Assembly.

MYSORE IRRIGATION (LEVY OF BETTERMENT CONTRIBUTION AND WATER RATE) BILL, 1957.

Motion to consider.

Sri H. S. RUDRAPPA (Minister for Agriculture).—Sir, I beg to move :

"That the Mysore Irrigation (Levy of Betterment Contribution and Water Rate) Bill, 1957, as reported by the Select Committee, be taken into consideration."

Mr. SPEAKER.—Motion moved :

"That the Mysore Irrigation (Levy of Betterment Contribution and Water Rate) Bill, 1957, as reported by the Select Committee, be taken into consideration."

Sri H. S. RUDRAPPA.—I only want to thank the Members of the Select Committee for having taken the trouble of reporting on this Bill early.

*ಶ್ರೀ ಕೆ. ಕೆಂಚಪ್ಪ (ಹಿರಿಯೂರು).—ಮಾನ್ಯ ಅಧ್ಯಕ್ಷರೆ, The Mysore Irrigation (Levy of Betterment Contribution and Water Rate) Bill, 1957 ಇದನ್ನು ಸಭೆಯ ಮುಂದೆ ಒಪ್ಪಿಗೆಗೋಸ್ಕರ ಈಗ ಇಟ್ಟಿದ್ದಾರೆ. ಈ ಬಿಲ್ಲಿನ ವಿಚಾರದಲ್ಲಿ ಹಿಂದೆ ನಾನು ಹೇಳಿದ್ದಲ್ಲಾ ಈಗ ನನಗೆ ನೆನಪಿಗೆ ಬರುತ್ತದೆ. ಈ ಬಿಲ್ಲನ್ನು ಇದೇ ರೀತಿಯಾಗಿ ಮಂಜೂರು ಮಾಡಿದರೆ ಇದರಿಂದ ಆಗತಕ್ಕ ಹಾನಿ ಅನರ್ಥ ಏನೇನು ಎಂಬುದನ್ನು ಹೇಳಬೇಕಾದುದು ನಮ್ಮ ಕರ್ತವ್ಯ. ಈ ಬಿಲ್ಲು ಸಭೆಯ ಮುಂದೆ ಮೊದಲು ಮಂಡಿಸಿದಾಗ್ಗೆ ನಾನು ಕೆಲವಾರು ವಿಚಾರಗಳನ್ನು ಹೇಳಿದೇನೆ. ಅದನೇ ಪುನಃ ಹೇಳಿ ಪುನರುಕ್ತಿ ದೋಷಕ್ಕೆ ಗುರಿಯಾಗಲು ನಾನು ಇಷ್ಟಪಡುವುದಿಲ್ಲ. ಅನಿವಾರ್ಯವಾಗಿ ಕೆಲವು ವಿಚಾರಗಳನ್ನು ಹೇಳಬೇಕಾಗಿದೆ. ಈ ಮಸೂದೆಯನ್ನು ಸಭೆಯ ಮುಂದೆ ತರುವುದಕ್ಕೆ P.W.D. ಮಂತ್ರಿಯವರಿಗೆ ಅಧಿಕಾರ ಇದೆ. ಜಮೀನಿನಿಂದ ಅಪ್ರತ್ಯಕ್ಷವಾಗಿ ಹೆಚ್ಚು ಆದಾಯವನ್ನು ತೆರಿಗೆಯ ಮೂಲಕ ಸರಕಾರವು ಪಡೆಯುವುದಕ್ಕೋಸ್ಕರ ಈ ಬಿಲ್ಲನ್ನು ಮಂತ್ರಿಯವರು ತಂದಿದ್ದಾರೋ ಏನೋ ಎಂದು ಈ ಸಭೆಯ ಸದಸ್ಯರಿಗೆ ಅನ್ನಿಸುತ್ತದೆ. ಆದುದರಿಂದ ಈ ವಿಚಾರದಲ್ಲಿ ಕೆಲವಾರು ಪ್ರಶ್ನೆಗಳನ್ನು ಮಂತ್ರಿಯವರಿಗೆ ಕೇಳಬೇಕಾಗುತ್ತದೆ. ಏತಕ್ಕೆಂದರೆ, ಈ ಮಸೂದೆಯ ಧ್ಯೇಯ ಧೋರಣೆಯನ್ನು ಹೇಳುವಾಗ ಅವರು ಹೇಳಿದ್ದೇನೆಂದರೆ ಯಾವುದಾದರೂ ಒಂದು ನೀರಾವರಿ ಯೋಜನೆಯನ್ನು ಮಾಡಿ ನೀರನ್ನು ಒದಗಿಸಿದಾಗ ಜಮೀನಿನ ಬೆಲೆ ಹೆಚ್ಚಾಗುತ್ತದೆ. ಜಮೀನಿನ ಬೆಲೆ ಹೆಚ್ಚಾಗುವುದರ ದೆಶೆಯಿಂದ ಏತಕ್ಕೆ ಹೆಚ್ಚು ಮೊಬಲಗು ಸರಕಾರಕ್ಕೆ ಬರಬಾರದು ? ಸರಕಾರ ಏತಕ್ಕೆ ಹೆಚ್ಚು ಮೊಬಲಗು

[DEPUTY SPEAKER in the Chair.]

ತೆಗೆದು ಕೊಳ್ಳಬಾರದು ಎಂಬ ಪ್ರಶ್ನೆ ಇದೆ. ಇನ್ನೊಂದ ಪ್ರಶ್ನೆ ಇದೆ. ಭೂಮಿಗೆ ನೀರು ಒದಗಿಸಿದಾಗ ನೀರಾವರಿ ಕಂದಾಯವನ್ನು ವಸೂಲು ಮಾಡಬೇಕೆಂದು ಇದೆ. ಕಾಂಟ್ರಿಬ್ಯೂಷನ್ ಮೊಬಲಗನ್ನು ವಸೂಲು ಮಾಡುವುದಲ್ಲದೆ ಸಾಗು ಮಾಡಲು ಕೊಡುವ ಜಮೀನಿನಮೇಲೆ ಬೇರೆ ಕಾಂಟ್ರಿಬ್ಯೂಷನ್ ವಸೂಲು ಮಾಡುತ್ತಾರೆ ಎಂಬುದನ್ನು ಹೇಳಬೇಕಾಗುತ್ತದೆ. ಏತಕ್ಕೆಂದರೆ ಇದುವರೆಗೆ ಹೇಳುವ ರೀತಿಯನ್ನು ನೋಡಿದರೆ ನೀರು ಕೊಡಲಾಗುತ್ತದೆ. ಆದುದರಿಂದ ಕಾಂಟ್ರಿಬ್ಯೂಷನ್ ಮೊಬಲಗನ್ನು ಏತಕ್ಕೆ ಕೊಡಬಾರದು ಎಂಬ ಪ್ರಶ್ನೆ ಇದೆ. ನೀರಾವರಿ ಕಂದಾಯವನ್ನು ಏತಕ್ಕೆ ಕೊಡಬಾರದು ಎಂಬುದು ಇನ್ನೊಂದು ಪ್ರಶ್ನೆ ಇದೆ. ಎರ

(ಶ್ರೀ ಕೆ. ಕೆಂಚಪ್ಪ)

ಡನ್ನೂ ತೆಗೆದು ಕೊಳ್ಳತಕ್ಕಂಥಾದ್ದು ನ್ಯಾಯವಲ್ಲವೆಂದು ಟೀಕೆ ಮಾಡಬೇಕಾಗುತ್ತದೆ. ನೀರನ್ನು ಒದಗಿಸುವುದ ಕ್ಕೋಸ್ಕರ ಜಮೀನು ಬೆಲೆ ಹೆಚ್ಚಾಗುತ್ತದೆ. ಸರ ಕಾರಕ್ಕೂ ಸ್ವಲ್ಪ ಮೊಬಲಗನ್ನು ಕೊಡಬೇಕು ಎಂಬ ಭಾವನೆಯಿಂದ ಈ ಮಸೂದೆಯನ್ನು ತಂದಿದ್ದಾರೆಂದು ಈ ಮಸೂದೆಯಲ್ಲಿಯ ಕೆಲವು ಕಲಮುಗಳಿಂದ ಅನ್ನಿಸು ತ್ತದೆ. "ಸ್ವಲ್ಪ" ಎಂಬ ಪದ ಅಷ್ಟು ಸರಿಯಾಗಿಲ್ಲ. ನೀರಾವರಿ ಕಂದಾಯವನ್ನು ನಿಗದಿಯಾಗಿ ನಿಷ್ಕರ್ಷೆ ಯಾಗದೇ ಇದ್ದರೂ ಈ ಮಸೂದೆಯಲ್ಲಿ ಇರುವಂತೆ ಸರ್ವೆ ಸಾಧಾರಣವಾಗಿ 18 ರೂಪಾಯಿಗಳವರೆಗೆ ನೀರಾವರಿ ಕಂದಾಯವನ್ನು ಹಾಕತಕ್ಕಂಥಾ ಸಾಹಸ ವನ್ನು ಮಾಡಿದ್ದಾರೆಂದು ಕಾಣುತ್ತದೆ. ಮೊಬಲಗನ್ನು ನಿಗದಿ ಮಾಡತಕ್ಕಂಥ ಅಧಿಕಾರ, ಅಧಿಕಾರ ಡೆಪ್ಯುಟಿ ಕಮೀಷನ್ನರಿಗೆ ಇದೆ ಎಂದು ಹೇಳಿದೆ. ಈ ವಿಚಾರದಲ್ಲಿ ಒಂದಿಷ್ಟು ಲಾಯರ ಕೆಲಸ ಮಾಡಬೇಕಾಗಿದೆ. ಲಾಯರ ಕೆಲಸ ಮಾಡದಿದ್ದರೆ ಸರಿಹೋಗುವುದಿಲ್ಲ. ಭೂಮಿಗೆ ಬರಿ ನೀರನ್ನು ಒದಗಿಸುವುದಕ್ಕೋಸ್ಕರ ಈ ಮಸೂದೆಯನ್ನು ತಂದಿದ್ದೀರೆಯೋ ಎಂದು ಕೇಳುತ್ತೇನೆ ಅಥವಾ ನೀರನ್ನು ಒದಗಿಸುವುದಕೋಸ್ಕರ ಕಾಂಟ್ರಿಬ್ಯೂಷನ್, ನೀರು ಕಂದಾಯವನ್ನು ವಸೂಲು ಮಾಡುವುದಕ್ಕೋ ಎಂದು ಕೇಳುತ್ತೇನೆ. ಈ ವಿಚಾರವನ್ನು ನಿಷ್ಕರ್ಷೆ ಯಾಗಿ ಹೇಳಬೇಕು. ಇದನ್ನು ಹೇಳುವಾಗ ಕೆಲವು ವಿಚಾರಗಳನ್ನು ತಮ್ಮ ಗಮನಕ್ಕೆ ತರುತ್ತೇನೆ. 3ನೇ ಕ್ಲಾಜಿನಲ್ಲಿ ಈ ರೀತಿ ಇದೆ:

> "Levy of Betterment contribution.—The Government shall be entitled to levy a betterment contribution, in accordance with the provisions of this Act, from the landholder or holder of any land which, in its opinion, is benefited by the construction restoration, expansion or alteration of any work by the Government, whether after the commencement of this Act or at any time before such commencement, but not earlier . . . ."

ಕನ್ನಡದಲ್ಲಿಯೇ ಮಾತನಾಡಬೇಕೆಂಬ ಭಾವನೆ ನನಗೆ ಇದೆ. ಆದರೂ ಒಂದೊಂದು ಸಾರಿ ಮಧ್ಯದಲ್ಲಿ ಇಂಗ್ಲೀಷಿನಲ್ಲಿ ಹೇಳದೆ ವಿಧಿಯಿಲ್ಲ. ಸಾಧ್ಯವಾದ ಮಟ್ಟಿಗೂ ಕನ್ನಡದಲ್ಲಿ ಮಾತನಾಡಲು ಪ್ರಯತ್ನ ಮಾಡುತ್ತೇನೆ. ಹೇಳುವುದರಲ್ಲಿ ಏನಾದರೂ ಲೋಪ ವಾದರೆ ಕ್ಷಮಿಸಬೇಕೆಂದು ಕೇಳಿಕೊಳ್ಳುತ್ತೇನೆ.

'Work' ಎಂದರೆ ಕಾಮಗಾರಿ ಎಂಬ ಪದವನ್ನು ಉಪಯೋಗಿಸಲಾಗಿದೆ. ಕಾಮಗಾರಿ ಎಂದರೆ ನೀರಾ ವರಿ ಕಾಮಗಾರಿ ಎಂದು ಅನಿಸುವದಿಲ್ಲ. ಆದುದರಿಂದ ಬೇರೆ ಕಾಮಗಾರಿಗೂ ಅನ್ವಯಿಸುತ್ತದೆ. Work ಪದಕ್ಕೆ ಈ ರೀತಿ ಅರ್ಥ (1)ದಲ್ಲಿ ಕೊಟ್ಟಿದ್ದಾರೆ. (1) 'Work' means an irrigation or drainage work whether completed or not. Drainage work ಅಂದರೆ ಏನು ? Irrigation work ಅಂದರೆ ಏನು ? ಪದಗಳನ್ನು ಬಹಳ ವಿಚಾರ ಮಾಡಿ ಉಪಯೋಗಿಸ ಬೇಕಾಗುತ್ತದೆ. ನಾನು ಹಿಂದೆ ಹೇಳಿದಂತೆ ಇದರಲ್ಲಿ ಒಂದು ಲಾಜಿಕ್ ಇಲ್ಲ. ಹಾಗೆ ಇಲ್ಲಿ ಏನು ಮಾಡಿದ್ದಾರೆಂಬುದನ್ನೂ ಸಹ ಹೇಳುತ್ತಿ ದ್ದೇನೆ. ಆ ರೀತಿಯಾಗಿ ಒಂದು ಪದವನ್ನು ಉಪ ಯೋಗಿಸುವಾಗ ಆ ಪದದ ಅರ್ಥದ ವ್ಯಾಪ್ತಿಯನ್ನು ಅರಿತುಕೊಂಡು ಆ ಪದವನ್ನು ಉಪಯೋಗಿಸಿದ್ದರೆ ಚೆನ್ನಾಗಿತ್ತು. ಇದನ್ನು ಮುಂದೆ ಕೋರ್ಟುಗಳಲ್ಲಿ, ನ್ಯಾಯಾಲಯಗಳಲ್ಲಿ ಎಲ್ಲಾ ಒಡಿಸಿ ಹೇಳಬೇಕಾಗು ತ್ತದೆ. ನಮಗೆ ಇರತಕ್ಕ ಮನೋಭಾವನೆಯಿಂದ ಯಾವ ಕೆಲಸವನ್ನು ಸಹ ಮಾಡುವುದಕ್ಕಾಗುವುದಿಲ್ಲ. "Common sense has absolutely no place in legal aspect. Common sense plays its part only for the purpose of explaining the words incorporated in a section." ಈಗ ಉಪಯೋಗಿಸಿರತಕ್ಕದ್ದು ಬಳಕೆ ಮಾಡಿರತಕ್ಕ ಪದಗಳು ಯಾವ ಅರ್ಥವನ್ನು ಕೊಡಬೇಕೆಂಬ ರೀತಿ ಯಲ್ಲಿ ಉಪಯೋಗಿಸಬೇಕೋ ಆ ರೀತಿಯಲ್ಲಿ ಉಪ ಯೋಗಿಸಿಲ್ಲ. ಬೇರೆ ಪದಗಳನ್ನು ಉಪಯೋಗಿಸುವುದ ಕ್ಕಾಗುವುದಿಲ್ಲವೇ ಎಂದು ನಾನು ಕೇಳುತ್ತೇನೆ. ನಿಜವಾಗಿಯೂ ಇರ್ರಿಗೇಷನ್ ಮತ್ತು ಡ್ರೈನೇಜ್‌ವರ್ಕ್ ಎನುವುದಕ್ಕೆ ಯಾವ ಅರ್ಥವನ್ನು ಕೊಟ್ಟು ಈ ಪದ ಗಳನ್ನು ಇಟ್ಟಿದ್ದೀರಿ ? ಯಾವ ಅರ್ಥ ಇಲ್ಲಿ ಬರುತ್ತದೆ ?

ಇನ್ನೊಂದು ವಿಚಾರ. ಇರ್ರಿಗೇಷನ್ ಮತ್ತು ಡ್ರೈ ನೇಜ್ ವರ್ಕ್ಸ್ ಎಂಬ ಪದಗಳನ್ನು ಮತ್ತೆ ವಿಶದೀಕರಿಸ ಬೇಕು. ಒಂದು ಪದದ ವ್ಯಾಪ್ತಿಯನ್ನು ಡೆಫಿನಿಷನ್ನಿ ನಲ್ಲಿ ಹೇಳಬೇಕೆಂದು ವಿಧಾಯಕವಾಗಿದೆ. ತಾವು ಅನುಸರಿಸಿದ ಮಾರ್ಗವೇ ಬೇರೆ. ಈ ರೀತಿ ಯಾವ ಕಾನೂನಿನಲ್ಲೂ ಅನುಸರಿಸಿಲ್ಲ. ಇಂಡಿಯನ್ ಪೀನಲ್ ಕೋಡ್ ಪುಸ್ತಕವನ್ನು ಬರೆದಿದ್ದಾರೆ. ಅದರಲ್ಲಿ ಸೆಕ್ಷನ್ನು ಗಳ ಭಾಷಾಶೈಲಿಯನ್ನು ನೋಡಿ ಈ ಕಾನೂನು ಗಳನ್ನು ಮಾಡಿದ್ದರೆ ಚೆನ್ನಾಗಿರಲಿಲ್ಲವೇ ? ಹಾಗೆ ಇದ್ದಿ ದ್ದರೆ ಈ ಭಾಷೆ ಇನ್ನೂ ಚೆನ್ನಾಗಿ ಆಗುತ್ತಿತ್ತೆಂದು ಹೇಳಬೇಕಾಗಿದೆ. ಇರಿಗೇಷನ್ ಮತ್ತು ಡ್ರೈನೇಜ್ ವರ್ಕ್ಸ್ ಎಂದರೆ ಅರ್ಥವೇನೆಂಬುದನ್ನು ತಾವು ಹೇಳ ಬೇಕು. ಈ ಮಸೂದೆಯ ಎರಡನೆಯ ಕ್ಲಾಜಿನಲ್ಲಿ ಡೆಫಿನಿಷನ್ನಿನಲ್ಲಿ ಇರ್ರಿಗೇಷನ್ ಮತ್ತು ಡ್ರೈನೇಜ್ ವರ್ಕ್ಸ್ ಎಂಬುದಾಗಿ ಎರಡೇ ಪದಗಳನ್ನು ಉಪಯೋಗಿ ಸಿದ್ದೀರಿ. ಡ್ರೈನೇಜ್ ಎಂದರೆ ಎಲ್ಲಿಯಾದರೂ ಒಂದು ಕಡೆ ನೀರು ಸ್ಟಾಗ್‌ನೇಟ್ ಆದರೆ ಆ ನೀರನ್ನು ಓಡಿಸ ತಕ್ಕದ್ದು. ನೀರಾವರಿಯ ನೀರನ್ನು ಕೊಡತಕ್ಕ ಹವ್ಯಾಸ ಡ್ರೈನೇಜಿನಲ್ಲಿ ಬರುವುದಿಲ್ಲ. 'Channels, whether natural or artificial work' ಎಂದರೆ ಏನು ಅರ್ಥ ? ಸರ್ಕಾರದ ದುಡ್ಡು ಖರ್ಚು ಮಾಡಿ ಆ ಖರ್ಚಿಗೋಸ್ಕರ ನಾವು ಆ ದಂಡನ್ನೇ ವಾಪಸ್ಸು ಪಡೆಯುತ್ತಿದ್ದೇವೆಂದು ಜನರಲ್ಲಿ ಹೇಳಿದರೆ ನ್ಯಾಚುರಲ್ ಎನ್ನುವ ಪದಕ್ಕೇನಾದರೂ ಅರ್ಥವಿದೆಯೇ ? ಒಂದು ಚಾನಲ್ ಇದ್ದರೆ, ಅದಕ್ಕೆ ಖರ್ಚು ಮಾಡದೇ ಇದ್ದರೆ, ಅದಕ್ಕೆ ದುಡ್ಡು ತೆಗೆದುಕೊಳ್ಳುವುದಕ್ಕೆ ಹೊರಟಿದ್ದೀರಿ. ತಮ್ಮ ಬುದ್ಧಿಗೆ ಹೊಳೆಯದಿರುವ ಒಂದು ತಿಳಿವಳಿಕೆ ಯನ್ನು ನಾನು ಈಗ ಕೊಡುತ್ತೇನೆ. ಇಂತಹ ಸಮಯ ದಲ್ಲಿ ಮರಾಮತ್ತು ಶಾಖಾ ಸಚಿವರು ಇದ್ದಿದ್ದರೆ ಬಹಳ ಚೆನ್ನಾಗಿತ್ತು. ಅವರು ಲಾಯರ್ ಹೌದೋ ಅಲ್ಲವೋ ಗೊತ್ತಿಲ್ಲ. ಆದರೂ ಭಾಷಾಶೈಲಿಯನ್ನು ಚೆನ್ನಾಗಿ ಅರಿತವರು. ನ್ಯಾಚುರಲ್ ಚಾನಲ್ ಎಂದು ಹೇಳುವ ರೂಪದಲ್ಲಿ ಏನು ಕ್ಲಾಜಿನಲ್ಲಿ ಹೇಳಿದ್ದೀರಿ, ಅಂತಹ ಸಂದರ್ಭದಲ್ಲಿ ಏನು ಖರ್ಚು ಮಾಡುತ್ತೀರಿ ? ನ್ಯಾಚು ರಲ್ ಅಥವಾ ಆರ್ಟಿಫಿಷಿಯಲ್ ಎಂಬ ಪದಗಳು ಬೇಡ. "For the discharge of waste or surplus water" ಎಂದರೆ ಅರ್ಥವೇನು ? ಏನಾದರೂ ನೀರು ನಿಂತಿದ್ದರೆ, ರಿಪೇರಿ ಮಾಡಿದರೆ,

ನೀವು ಕಂದಾಯವನ್ನು ವಸೂಲು ಮಾಡುತ್ತೀರಾ ? ಎಲ್ಲಾದರೂ ನೀರು ನಿಂತಾಗ್ಗೆ ಅಲ್ಲಿ ನಿಲ್ಲತಕ್ಕ ನೀರನ್ನು ಪ್ರಿವೆಂಟ್ ಮಾಡಿ, ಅದನ್ನು ತೆಗೆದುಕೊಂಡು ಹೋದರೆ ಆಗ ನೀವು ಕಂದಾಯ ಹಾಕುತ್ತೀರಿ. ಈ ಪದಗಳನ್ನು ವಿಚಕ್ಷಣೆಯಿಂದ ಉಪಯೋಗಿಸಬೇಕಾಗಿ ಬರುತ್ತದೆ. ಏನು ಮಾಡುತ್ತಾರೆಂಬುದನ್ನು ತಾವು ಆಲೋಚನೆ ಮಾಡಬೇಕು. ಚಾನಲ್‌ಗಳಿಗೆ ಸಂಬಂಧಪಟ್ಟಂತೆ ಏನೇನು ಕ್ಲಾಜುಗಳನ್ನು ಮಾಡಿದರೂ ಸಹಿತ ನೀವು ಕಂದಾಯ ಕೊಡಬೇಕು ಎಂದು ಹೇಳುವುದು ಸರಿಯಲ್ಲ. ನೀರಾವರಿಗೆ ನೀರು ಕೊಟ್ಟರೆ ಕಂದಾಯ ಕೊಡಬೇಕು. ನೀರು ಕೊಟ್ಟರೆ ಕಂಟ್ರಿಬ್ಯೂಷನ್ ಕೊಡಬೇಕು ಎಂದು ಯಾವ ಪದದಲ್ಲಿ ಇದೆ ಎಂಬುದನ್ನು ತೋರಿಸಿಕೊಡಿ. ಡೆಫಿನಿಷನ್ ಕ್ಲಾಜಿನ (c) 2ರಲ್ಲಿ "the escape channels from an irrigation work" ಎಂದು ಹೇಳಿದೆ. ಇದು ಜಮೀನು ಸಂಬಂಧವಾಗಿದೆಯೋ ಇಲ್ಲವೋ ಗೊತ್ತಿಲ್ಲ. ಬೆನಿಫಿಟೆಡ್ ಎಂದರೆ ಏನು ? ನನ್ನ ಜಮೀನಿಗೆ ಬೆನಿಫಿಟೆಡ್ ಕಾಂಟ್ರಿಬ್ಯೂಷನ್ ಕೊಟ್ಟು ನೀರಾವರಿಗೂ ಕಂದಾಯ ಕೊಡಿ ಎಂದರೆ, ಏನು ಅರ್ಥ ? ಬೆನಿಫಿಟೆಡ್ ಎಂದರೆ ಏನು ಅರ್ಥ ? ಇದರಿಂದ 'ಬೆನಿಫಿಟೆಡ್' ಆಗದೆಯೇ ! ಇವನ್ನು ಮಾಡಬಾರದಾಗಿತ್ತು. ಜನರಿಗೆಲ್ಲಾ ತಪ್ಪು ದಾರಿ ಹಿಡಿಸುವ ಹಾಗೆ ಏನೇನೋ ಮಾಡುವುದಕ್ಕೆ ಹೊರಟಿದ್ದಾರೆ. ಇನ್ನು (iii)ರಲ್ಲಿ 'Dams, weirs embankments, sluices and groynes,' (iv)ರಲ್ಲಿ 'all works for the protection of lands' ಎಂದು ಹೇಳಿದ್ದಾರೆ. ಇದರಲ್ಲಿ ಇರ್ರಿಗೇಷನ್ ಪದವೇ ಇಲ್ಲ. ಈಗ ಒಂದು ಪ್ರಶ್ನೆಯನ್ನು ಕೇಳುತ್ತೇನೆ. ನಮ್ಮಿಂದ ದುಡ್ಡು ತೆಗೆದುಕೊಳ್ಳುತ್ತಾರೆ. ನಮ್ಮ ಜಮೀನಿನ ಕೆಳಗೆ ಏನಾದರೂ ಒಂದು ಬಂಡು ಹಾಕಿಕೊಳ್ಳಬೇಕಾದರೆ ಅವರೇ ಖರ್ಚು ಮಾಡುತ್ತಾರೆ. ತಾವು ಇದುವರೆಗೂ ತಕಾವಿ ಸಾಲ ಜಮೀನು ಬಾಬು ಮಾಡುವುದಕ್ಕೆ ಸಾಲ—ಈ ರೀತಿ ಕೊಡುತ್ತಿದ್ದಿರಿ. ಆದರೆ ಕಂಟ್ರಿಬ್ಯೂಷನ್ ವೊಬಲಗು ಕೊಡಬೇಕೆಂದು ಬಂದ ಕೂಡಲೆ ಅದು ನಿಂತು ಹೋಗಿದೆ. ಪಾಂಚವಾರ್ಷಿಕ ಯೋಜನೆಯಲ್ಲಿ ಇದನ್ನು ಆಲೋಚನೆ ಮಾಡಬೇಕು. ಈ ರೀತಿಯಾಗಿ ನೀರಾವರಿ ಸೌಕರ್ಯಕ್ಕೆ ಈ ಕಾನೂನು ಸಂಬಂಧಪಟ್ಟಿದೆಯೋ ಇಲ್ಲವೇ ಎಂಬುದನ್ನು ನೋಡಬೇಕು. ನೀರಾವರಿಗೆ ಸಂಬಂಧಪಟ್ಟಂತೆ ಕಂಟ್ರಿಬ್ಯೂಷನ್ ವೊಬಲಗು ತೆಗೆದುಕೊಳ್ಳುವುದಕ್ಕೆ ಕಂಟ್ರಿಬ್ಯೂಷನ್ ಪದವನ್ನು ಉಪಯೋಗಿಸಿದ್ದಾರೆ. ನೀರಾವರಿ ಯೋಜನೆ ಮಾಡುತ್ತೇವೆಂದು ಹೇಳಿ ಅದರ ಮೂಲಕ ನೀರು ಕೊಡುತ್ತೇವೆಂದು ಹೇಳಿ ತಾವು ಇಲ್ಲಿಯೇ ಉಳಿತಿರುತ್ತೀರ ? ಅದನ್ನು ಆಲೋಚನೆ ಮಾಡಬೇಕು. ಅದನ್ನು ಬೇರೆ ಬೇರೆಯಾಗಿ ವಿಂಗಡಿಸಬೇಕು. ಇದಕ್ಕೆ ಒಂದು ಉದಾಹರಣೆಯನ್ನು ಕೊಡುತ್ತೇನೆ. ನೀರು ಒಂದು ಹಳ್ಳದಲ್ಲಿ ಹರಿಯುತ್ತಿದ್ದರೆ, ಅದು ಸರ್ಕಾರದ್ದು ಆಗಿದ್ದರೆ, ಆ ನೀರನ್ನು ತೆಗೆದುಕೊಂಡರೆ ಕಂಟ್ರಿಬ್ಯೂಷನ್ ವೊಬಲಗು ಕೊಡಬೇಕೆಂದು ಎಲ್ಲಿದೆ ? ಅದಕ್ಕೆ ಟೆಂಪೊರರಿ ವಾಟರ್ ರೇಟ್ ತೆಗೆದುಕೊಳ್ಳಬೇಕೆಂದು ಕಾನೂನಿನಲ್ಲಿದೆಯೇ ? ಇನ್ನೊಂದು ನೀರಾವರಿ ಯೋಜನೆಯೂ ಇಲ್ಲ. ಹಿಂದೆ ತಕಾವಿ ಸಾಲ ತೆಗೆದುಕೊಳ್ಳುತ್ತಿದ್ದರು. ಕೇವಲ ನೀರಾವರಿ ಯೋಜನೆಗೋಸ್ಕರ ಇದು ಸಂಬಂಧವಿಲ್ಲ. ಈ ಯೋಜನೆಯಿಂದ ತಾವು ಇದುವರೆಗೂ ನಡೆದುಕೊಂಡು ಬಂದಿರತಕ್ಕ ಸಂಪ್ರದಾಯವನ್ನು ಮೂಲೆಗೊತ್ತಿದ್ದೀರಿ. ಮೊಗಲ್ ಚಕ್ರವರ್ತಿಗಳ ಕಾಲದಿಂದಲೂ ಬಂದಿರುವ ಪದ್ಧತಿಯನ್ನು ಒಂದು ಮೂಲೆಗೆ ತಳ್ಳಿ ಬೇರೆ ಮಾರ್ಗವನ್ನು ಮಾಡಿದ್ದೀರಿ. ಒಂದು ಜಮೀನಿನ ಕಂದಾಯವನ್ನು ಕೊಡುವ ಮಾರ್ಗ ಅನ್ವಯಿಸುವುದನ್ನು ತಾವು ಇವತ್ತಿನ ದಿವಸ ಉಪೇಕ್ಷೆ ಮಾಡಿದ್ದೀರಿ. ಇದುವರೆಗೂ ಸರ್ವೆ ಮ್ಯಾನ್ಯುಯಲ್‌ನಲ್ಲಿ ಹೇಳಿರುವ ಪ್ರಕಾರ ಏನೂ ಮಾಡಿಲ್ಲ. ಎಲ್ಲಾ ಅಂಶಗಳೂ ಸರ್ವೇ ಮ್ಯಾನ್ಯುಯಲ್ಲಿ ನ್ಯಾಯೀ ಉಲ್ಲಖಿತವಾಗಿದೆ. ಸರ್ವೆ ಕ್ಲಾಸಿಫಿಕೇಷನ್ ಮತ್ತು ಸೆಟಲ್‌ಮೆಂಟ್ ವಿಷಯವಾಗಿ ಮತ್ತೆ ಹಿಂದೆ ಹೇಳಿದ್ದನ್ನು ವಿಶದವಾಗಿ ಹೇಳುವುದಕ್ಕೆ ಹೋಗುವುದಿಲ್ಲ. ಕಲೆಕ್ಟರನ್ನು ಇಲ್ಲಿ ನೇಮಕ ಮಾಡಬೇಕು. ನೀರಾವರಿ ಕಂದಾಯವನ್ನು ನಿಗದಿ ಮಾಡಬೇಕು. ಸರ್ವೆ ಡಿಪಾರ್ಟ್‌ಮೆಂಟನ್ನು ತೆಗೆದು ಹಾಕಿ ಏನು ಮಾಡಬೇಕೆಂದು ಇದ್ದೀರಿ ? ಪಬ್ಲಿಕ್ ವರ್ಕ್ಸ್ ಡಿಪಾರ್ಟ್‌ಮೆಂಟಿಗೆ ಪ್ರಾಮಿನೆನ್ಸ್ ಬಂದಿದೆ. ಅದಕ್ಕೆ ಆ ರೀತಿ ಪ್ರಾಮಿನೆನ್ಸ್ ಕೊಡಬಾರದು. ಏತಕ್ಕೆಂದರೆ ಡಾಕ್ಟರ್ ಲಾಯರ್ ಆಗುವುದಿಲ್ಲ, ಲಾಯರ್ ಡಾಕ್ಟರ್ ಆಗುವುದಿಲ್ಲ. ಇದು ಸರ್ವೆ ಡಿಪಾರ್ಟ್‌ಮೆಂಟ್ ಅನುಸರಿಸುವ ಮಾರ್ಗ. ಬೇರೆ ನಿಯಮಾವಳಿಗಳು ಬಹಳ ಇವೆ. ಅದರಂತೆ ಅನುಸರಿಸಬೇಕು. ಈ ರೀತಿ ಮಾಡುವುದರಿಂದ ಪ್ರಜೆಗಳಿಗೆ ತುಂಬ ಕೆಡಕು ಮಾಡುತ್ತೀರಿ. ಅದು ಹೇಗೆ ಎಂದರೆ—ಒಂದು ದೊಡ್ಡ ಕೆರೆ ಇದ್ದರೆ ಅದರ ಪಕ್ಕದಲ್ಲಿ ಅನೇಕ ಸಣ್ಣ ಸಣ್ಣ ಕೆರೆಗಳಿದ್ದೇ ಇರುತ್ತವೆ. ಹೀಗೆ ದೊಡ್ಡ ಕೆರೆಗಳ ಮಗ್ಗುಲನಲ್ಲೇ ಕಟ್ಟಿಸಿರುವಂಥ ಕೆರೆಗಳ ಅನುಕೂಲವುಳ್ಳ ಜಮೀನುಗಳಿಗೆ ಎಕರೆಗೆ ನಾಲ್ಕು ಐದು ರೂಪಾಯಿಗಳ ಕಂದಾಯವನ್ನು ನಿಗದಿಮಾಡಿರುತ್ತಾರೆ. ಆದರೆ ಹಿಂದಿನಕಾಲದಲ್ಲಿ ಕಟ್ಟಿಸಲ್ಪಟ್ಟ ಕೆರೆಗಳಿಗೆ ಖರ್ಚು ಕಡಮೆ ಬಂದಿರಬಹುದು. ಆದರೆ ಈ ದಿವಸ ಕೆರೆಗಳನ್ನು ಕಟ್ಟಿಸಬೇಕಾದರೆ ಹೆಚ್ಚು ಹಣ ಖರ್ಚಾಗುತ್ತದೆ. ಆದರೆ ಅಂಥ ದೊಡ್ಡ ಕೆರೆಗಳನ್ನು ಕಟ್ಟಿಸಿದ್ದರಿಂದ ಆ ಪ್ರಾಂತ್ಯದಲ್ಲಿ ಜಮೀನುಗಳಿಗೆ ಇದ್ದ ಬೆಲೆಗಿಂತ ಎಕರೆಗೆ 500 ರೂಪಾಯಿಗಳ ಮೇಲ್ಪಟ್ಟು ಅವುಗಳ ಬೆಲೆಯಲ್ಲಿ ಹೆಚ್ಚಾಗುವಂತಿದ್ದರೆ ಆಗ ಒಂದು ಎಕರೆಗೆ 500 ರೂಪಾಯಿಗಳಂತೆ ಸರ್ಕಾರದವರು ಈ ಬೆಟರ್‌ಮೆಂಟ್ ತೆರಿಗೆಯನ್ನು ವಸೂಲ್ಮಾಡಿಕೊಳ್ಳತಕ್ಕಬಗ್ಗೆ ಅಭ್ಯಂತರವಿರಲಾರದು. ಆದರೆ ಅಷ್ಟು ಬೆಲೆಯಲ್ಲಿ ಹೆಚ್ಚಾಗದಿದ್ದರೆ ಆಗ ಹೀಗೆ 500 ರೂಪಾಯಿಗಳನ್ನು ಕಡ್ಡಾಯವಾಗಿ ವಸೂಲಾಡಿಕೊಳ್ಳುವುದು ಯಾವ ಧರ್ಮ ? 500 ರೂಪಾಯಿ ಮ್ಯಾಗ್ಸಿಮಂ ಲಿಮಿಟ್ ಮಾಡಿರುವಾಗ ಏನೋ ಬೆಲೆಯಲ್ಲಿ ಸ್ವಲ್ಪ ಕಡಮೆಯಾಗಿದೆಯೆಂದು ಹೇಳಿ 495 ರೂಪಾಯಿಗಳನ್ನು ತೆಗೆದುಕೊಳ್ಳಿ ಎಂದುಹೇಳುವುದಕ್ಕೂ ಇದರಲ್ಲಿ ಅವಕಾಶವಿಲ್ಲ. ಅಂಥಾ ಸಂದರ್ಭಗಳು ಅನೇಕ ಬರಬಹುದು. ಆಗ ಯಾವ ಸರ್ಕಾರದವರು ಏನು ಮಾಡುತ್ತಾರೆ ? ಸರ್ಕಾರದವರು ಈ ವಿಚಾರದಲ್ಲಿ ಏನಾದರೂ ಕೂಲಂಕಷವಾಗಿ ಆಲೋಚನೆ ಮಾಡಿದ್ದಾರೆಯೇ ಎನ್ನತಕ್ಕ ಬಗ್ಗೆ ಅವರು ನನಗೆ ಉತ್ತರ ಹೇಳುವಾಗ ತಿಳಿಸಬೇಕಾಗಿದೆ. ನಾನು ಹಿಂದೆ ಹೇಳಿರತಕ್ಕ ಮಾತನ್ನೇ ಮತ್ತೊಂದು ಸಾರ್ತಿ ಹೇಳುತ್ತೇನೆ—ಮಾನ್ಯ ಮಂತ್ರಿಗಳು ತಮ್ಮ ಬುದ್ಧಿ ಚಮತ್ಕಾರಗಳನ್ನು ಖರ್ಚು ಮಾಡಲು ಈ ರೀತಿ ಒಂದು ಕಾನೂನನ್ನು ತರಬಾರದಾಗಿತ್ತು ಎಂದು. ಇಲ್ಲಿ ಡ್ರೈನೇಜ್ ವರ್ಕ್ ಕೂಡ includes channels ಎಂದು ಹೇಳಿದ್ದಾರೆ. ಅದೇ ಲೈನಿನಲ್ಲಿ ಮುಂದಕ್ಕೆ ಹೋದರೆ 'Drainage Work includes the escape channels from an irrigation work' ಎಂದು ಹೇಳಿದ್ದಾರೆ. ಅನಂತರ 'Irrigation Work' ಎಂದರೆ 'it includes—all canals, channels, tanks, wells, reservoirs, anicuts, bandharas, ponds, spring

(ಶ್ರೀ ಕೆ. ಕಂಚಪ್ಪ)

ponds; Kuntas, talaparigos, and madagus used for the supply of storage of water' ಎಂದು ಹೇಳಲಾಗಿದೆ. ಸುಖೀರಾಜ್ಯಸ್ಥಾಪನೆ ಮಾಡುತ್ತೇವೆಂದು ಹೇಳಿ ಗಾಂಧೀ ಭಕ್ತರು ಎರಡನೆಯ ಪಾಂಚವಾರ್ಷಿಕ ಯೋಜನೆಯನ್ನು ತಂದಿರುವುದರ ಮೂಲಕ ಬಾಗ ಗೂ ಕೂಡ ತೆರಿಗೆ ಹಾಕುವಂಥ ಸ್ಥಿತಿಗೆ ಬಂತು! ಅದಾದನಂತರ ನೋಡಿ, ಇಲ್ಲಿ 'and all works, embankments and structures, installations including the installation of pumping-sets ಎಂದು ಹೇಳಿದ್ದಾರೆ. ತಲಪರಿಗೆಗಳಿಗಾಗಿ ಸರ್ಕಾರದವರೇನು ಹಣ ಖರ್ಚುಮಾಡುತ್ತಾರೆ? 'Talaparigos and madagus used for the supply of or storage of water and all works'... ಎಂದು ಹೇಳಲಾಗಿದೆ. ಹಾಗೆ ಯಾವ ಒಂದು ಕಾನನೂ ಖರ್ಚುಮಾಡದವಿರತಕ್ಕ water source ಅನೂ ಸಹ ಸೇರಿಸಿ ಸರ್ಕಾರದವರು ಈ ಒಂದು ಕಾನೂನನ್ನು ಹೇಗೆ ರಚಿಸಿದರು? ಯಾವ ಉದ್ದೇಶಕ್ಕಾಗಿ ಅವರು ಹೀಗೆ ಮಾಡುತ್ತಿದ್ದಾರೆ? ಪಂಪಿಂಗ್ ಸೆಟ್‌ಗಳಿಗೂ ಕೂಡ ತರಿಗೆ ವಿಧಿಸಲು ಹೊರಟಿರುವುದನ್ನು ನೋಡಿದರೆ, ಸ್ವಾಮಿ, ನಾನು ಹೇಳುತ್ತೇನೆ—ಸರ್ಕಾರದವರು ಹಿಗೆ ಕಾನೂನುಗಳನ್ನು ಮಾಡುತ್ತಿರುವುದನ್ನು ನೋಡಿದರೆ ಇವರು ವ್ಯವಸಾಯಗಾರರಿಗೆ ಸುಖ ಬಯಸುವುದಕ್ಕೆ ಹೊರಟಿಲ್ಲ; ಆದರೆ ಆದಷ್ಟು ತೊಂದರೆ ಕೊಡಬೇಕೆಂದು ಅವರು ಹೊರಟಿರುವಂತೆ ಕಾಣುತ್ತದೆ. ಸ್ವಾಮಿ, ಇನ್ನು ಕ್ಲಾಜ್ 10 ರಲ್ಲಿ "for the avoidance of doubt, it is hereby declared that water rate leviable under this Act is not a tax on land but is a charge for the water supplied or used for the irrigation of land" ಎಂಬುದಾಗಿ ಹೇಳಿದ್ದಾರೆ. ಸ್ವಾಮಿ, ನನಗೆ ಮೊದಲು ಈ 'charge' ಎಂಬುದಾಗಿ ಉಪಯೋಗಿಸಲಾಗಿದ್ದ ಪದದ ಬಗೆ ಸ್ವಲ್ಪ ಅನುಮಾನ ಬಂದಿತ್ತು. ನಾನು ಡಿಕ್ಷನರಿಯನ್ನು ತೆಗೆದು ನೋಡಿದಮೇಲೆ ನನಗೆ ಸ್ವಲ್ಪ ಧೈರ್ಯ ಬಂದಿತು. 'ಟ್ಯಾಕ್ಸ್' ಎಂಬ ಶಬ್ದವನ್ನು ಉಪಯೋಗಿಸಿದರೆ ಜನರ ಮನಸ್ಸಿನಲ್ಲಿ ಏನೋ ಒಂದು ಭಾವನೆ ಬರುತ್ತದೆ. ಆದ್ದರಿಂದ ಅದನ್ನು ತಪ್ಪಿಸಲು ಆ ಶಬ್ದಕ್ಕೆ ಬದಲಾಗಿ ಈ "charge" ಎಂಬ ಪದವನ್ನು ಉಪಯೋಗಿಸಿ ಅದನ್ನು ಹೀಗೆ ಮಾರ್ಪಾಡು ಮಾಡಲು ಹೋಗಿದ್ದಾರೆಂದು ಭಾವಿಸಿದ್ದೆ. ಆದರೆ ಈ ಡೆಫಿನಿಷನ್‌ನಲ್ಲಿ ಅದರ ಅರ್ಥ ಹೀಗಿದೆ: "charge" ಎಂದರೆ "is a contribution for the water supplied or used for the irrigation of lands" ಎಂದು ಹೇಳಿದ್ದಾರೆ. Contribution ಎಂದರೆ —a levy or charge imposed upon the people ಎಂದು ಗೊತ್ತಾಗುತ್ತದೆ. To charge means to load heavily ಎಂದರ್ಥ. Here the word used is 'charge' that is to load the people with tax very heavily to the maximum extent; to load heavily means fully, completely to the very brim so that they may not even breath. ಹಿಂದೆಯೂ ಸರ್ಕಾರದವರು ರೈತರ ಮೇಲೆ ಅಸೆಸ್‌ಮೆಂಟ್ ಹಾಕುತ್ತಿದ್ದರು. ಆದರೆ ಈ ಮಾದರಿಯಲ್ಲೇ? ಹಿಂದಿನ ಕಾಲದಲ್ಲಿ ಒಂದು ಅಸೆಸ್‌ಮೆಂಟನ್ನು ಹಾಕಬೇಕಾಗಿದ್ದರೆ ನಾನಾ ಭಾಗದಲ್ಲಿ ನಾನಾ ವಿಚಾರಗಳನ್ನು ಕೂಲಂಕಷವಾಗಿ ವಿಮರ್ಶೆ ಮಾಡಿ, ಯಾವ ಒಂದು ಭಾಗದಲ್ಲಿ ತೆಗೆದುಕೊಂಡೇ ನೋಡಿದರೂ ರೈತರಿಗೆ ಒಂದು ಹೆಚ್ಚಿನ ಭಾರ ಮೇಲೆ ಬೀಳದ ರೀತಿಯಲ್ಲಿ ಸರ್ವೆ ಇಲಾಖೆಯವರು ಮಾಡುವಂತಹಂಥ ಕಾನೂನನ್ನು ಚಾಚೂತಪ್ಪದಂತೆ ವಿಧಿಸುತ್ತಿದ್ದಂಥ ದುಡ್ಡಿಗೆ ಅಸೆಸ್‌ಮೆಂಟ್ ಎಂದು ಹೇಳುತ್ತಿದ್ದರು. 'Assessment—to fix the amount, to fix the value or profit and to estimate' ಈಗ ಸರ್ಕಾರದವರು ವಿಧಿಸುತ್ತಿರುವ ಅಸೆಸ್‌ಮೆಂಟಿನಲ್ಲಿ 'the method of fixing the value or profit' ಎಂಬ ಅಂಶಗಳನ್ನು ಬಿಟ್ಟುಬಿಟ್ಟಿದ್ದಾರೆ. ಆದ್ದರಿಂದಲೇ ಈಗ tax ಎಂಬ ಪದಕ್ಕೆ ಪ್ರತಿಯಾಗಿ charge ಎಂಬ ಪದವನ್ನು ಉಪಯೋಗಿಸಿರುತ್ತಾರೆ. ಈ ರೀತಿ ಮಾಡಿರುವುದಕ್ಕಾಗಿ ನಾವು ತುಂಬ ವಿಷಾದಪಡಬೇಕಾಗಿದೆ. "ನಾಳೆದಿವಸ ನೀವು ಮೋಸಮಾಡಿದ್ದೀರಿ ಎಂದು ಯಾರೂ ಹೇಳಬೇಡಿ; ಅದಕ್ಕೋಸ್ಕರವಾಗಿಯೇ ನಾವೀಗ ಈ charge ಎಂಬ ಶಬ್ದವನ್ನು ಉಪಯೋಗಿಸಿದ್ದೇವೆ" ಎಂಬ ಭಾವನೆಯನ್ನು ಅವರು ಮನಸ್ಸಿನಲ್ಲಿಟ್ಟುಕೊಂಡೇ ಈ ಪದಗಳನ್ನುಪಯೋಗಿಸಿದ್ದಾರೋ ಏನೋ ಎಂದು ನನಗೆನ್ನಿಸುತ್ತದೆ.

ಶ್ರೀ ಎಚ್. ಎಸ್. ರುದ್ರಪ್ಪ (ವ್ಯವಸಾಯದ ಇಲಾಖೆಯ ಮಂತ್ರಿಗಳು).—ತಾವು ಈಗ ಹೇಳುತ್ತಿರುವುದು ಯಾವ ಸೆಕ್ಷನ್ನಿನಲ್ಲಿದೆ?

ಶ್ರೀ ಕೆ. ಕಂಚಪ್ಪ.—ನಾನು ಹೇಳುತ್ತಿರುವುದು ಹತ್ತನೆಯ ಕ್ಲಾಜಿನಲ್ಲಿ ಹೇಳಿರತಕ್ಕ ವಿಚಾರದ ಬಗ್ಗೆ. There are wet assessments, dry assessments and garden assessments. ತಾವು ಅಸೆಸ್‌ಮೆಂಟ್ ಎಂಬ ಶಬ್ದ ಉಪಯೋಗಿಸಬೇಕಾಗಿದ್ದರೆ ಅದು ಯಾವ ಸಂದರ್ಭದಲ್ಲಿ ಎಂದರೆ 'assessing the value of the property' means offering reason and observing all the means and methods to be adopted in order to arrive at a proper conclusion to assess or value the property. ಸ್ವಾಮಿ, ಇನ್ನು ಈ ಕ್ಲಾಜಿನಲ್ಲಿ ಹೇಳಿರತಕ್ಕ charge ಎಂಬ ಶಬ್ದವನ್ನು for the avoidance of doubt ಎಂದು ಹೇಳಿರತಕ್ಕ ಸಂದರ್ಭ ಹೇಗಿದೆ ಎಂದರೆ ನಾವುಗಳು ಮೈಸೂರಿಂದ-ಬೆಂಗಳೂರಿಗೆ ರೈಲಿನಲ್ಲಿ ಬರುವಾಗ ಆ ಪ್ರಯಾಣದ ಬಗ್ಗೆ ನಾವು ಕೊಡತಕ್ಕ ದುಡ್ಡಿಗೆ charge ಎಂದು ನಾವು ಹೇಳುತ್ತೇವೆ.

ಶ್ರೀ ಎಚ್. ಎಸ್. ರುದ್ರಪ್ಪ.—ಇದೂ ಸಹ ಅಷ್ಟೇ.

ಶ್ರೀ ಕೆ. ಕಂಚಪ್ಪ.—ಇದು ಅಷ್ಟಲ್ಲ, ಇದು ಮಾರ್ವಾಡಿ ವ್ಯವಹಾರ ಅಥವಾ Money-lender business ನಂತೆ ಕಾಣುತ್ತಿದೆ. ಈ ಶಬ್ದಗಳನ್ನು ನಾನು ಸಂತೋಷದ ಮನಸ್ಸಿನಿಂದ ಹೇಳುತ್ತಿಲ್ಲ. ದುಃಖ ಉಕ್ಕಿಬರುತ್ತಿದೆ. ಅಷ್ಟರಮಟ್ಟಿಗೆ ನನಗೆ ಮನಸ್ಸಿನಲ್ಲಿ ಸಂಕಟವಾಗುತ್ತಿದೆ. ಇನ್ನು ಜಮೀನಿಗೆ ನೀರಾವರಿ ಸೌಕರ್ಯಗಳನ್ನೊದಗಿಸಿದರೆ ಅದರ ಬಗ್ಗೆ ರೈತನಿಂದ ವಸೂಲ್ಮಾಡಿಕೊಳ್ಳಬೇಕಾದ ತೆರಿಗೆ ಬಗ್ಗೆ ರೈತನಿಗೆ ಸಾಧ್ಯವಿದ್ದರೆ ಅತನು ಅದನ್ನು ದ್ರವ್ಯ ರೂಪದಲ್ಲಾದರೂ ಕೊಡಬಹುದು, ಇಲ್ಲವೇ ಅತನಿಗಿರುವ ಜಮೀನಿನಲ್ಲಿ ಅರ್ಧ ಎಕರೆ ಭೂಮಿಯನ್ನು ಬೇಕಾದರೂ ಕೊಡ ಬಹುದೆಂದು ಹೇಳಲಾಗಿದೆ. ಹಾಗೆ ರೈತನಿಂದ ಸರ್ಕಾರದವರು

ಜಮೀನನ್ನು ತೆಗೆದುಕೊಳ್ಳುವಾಗ ಅದಕ್ಕೆ ಕಡಮೆ ಕಿಮ್ಮತ್ತು ಕಟ್ಟಿ ಅದನ್ನು ಬೇರೆಯವರಿಗೆ ಮಾರಾಟ ಮಾಡಿದನಂತರ ಆ ಜಮೀನಿನ ಬಗ್ಗೆ ಏನಾದರೂ ಹೆಚ್ಚು ಹಣ ಬಂದರೆ ಆ ರೈತನಿಂದ ಬರಬೇಕಾಗಿರುವ ತೆರಿಗೆ ಮೊಬಲಗೆಷ್ಟಿರುತ್ತದೋ ಅಷ್ಟನ್ನು ಉತ್ತಾರಹಾಕಿಕೊಂಡು ಉಳಿದ ಹಣವನ್ನು ಆ ರೈತನಿಗೇ ವಾಪಸ್ಸು ಕೊಡುತ್ತೇವೆಂದು ಹೇಳಿದ್ದಾರೆ. ಹೀಗೆಲ್ಲಾ ಇವರು ಬರೆಯಬೇಕಾಗಿದ್ದರೆ ಭೂಮಿಯ ಬೆಲೆಯನ್ನು ಸರ್ಕಾರದವರು ಯಾವ ರೀತಿ ಕ್ಯಾಲಿಕುಲೇಟ್ ಮಾಡುತ್ತಾರೆ? ಜನರನ್ನು ಇವರು ಹೇಗೆ ಸಮಾಧಾನಪಡಿಸುತ್ತಾರೆ? ಮೊದಲು ಹಾಗೇಕೆ ಕಡಮೆ ಬೆಲೆಗೆ ತೆಗೆದುಕೊಳ್ಳಬೇಕು? ಹಿಂದೆ ಎಲ್ಲಿಯಾದರೂ ಈ ತರಹ ಅಸೆಸ್‌ಮೆಂಟ್ ಹಾಕತಕ್ಕ ಪದ್ಧತಿ ಇತ್ತೇ? 1872ನೆಯ ಇಸ್ವಿಯಿಂದಲೂ ಜಾರಿಯಲ್ಲಿಲ್ಲದಂಥ ವ್ಯವಹಾರವನ್ನು ಈ ದಿವಸ ಗಾಂಧಿ ಭಕ್ತರು ಜಾರಿಗೆ ತಂದಿದ್ದಾರೆ. ಏತಕ್ಕಾಗಿ ಎಂದರೆ ದೇಶದಲ್ಲಿ ಸುಖೀರಾಜ್ಯವನ್ನು ಸ್ಥಾಪನೆ ಮಾಡುವುದಕ್ಕಾಗಿ ಎಂದು ಹೇಳುತ್ತಿದ್ದಾರೆ; ಬೆನ್ನುಮೂಳೆ ಮುರಿದುಹೋಗಿರತಕ್ಕ ರೈತನ ಮೂಳೆಗಳನ್ನು ಸರಿಮಾಡುವುದಕ್ಕೆಂದು ಹೇಳುತ್ತಿದ್ದಾರೆ! ಇಂಥ ಅಪಾಯಕರವಾದ ಮಸೂದೆಯನ್ನು ನಾವು ಬಹಳ ಹುಷಾರಾಗಿ ಪರಿಶೀಲನೆ ಮಾಡಬೇಕಾಗಿದೆ.

4-30 P.M.

ಮುಂದಕ್ಕೆ ಹೋದರೆ ಇನ್ನೂ ಸ್ವಲ್ಪ ವಿಚಾರವಿದೆ. ಅದೇನೆಂದರೆ ಮೂರನೆಯ ಕ್ಲಾಜಿನಲ್ಲಿ ಹೀಗೆ ಹೇಳಿದ್ದಾರೆ:

"The Government shall be entitled to levy a betterment contribution, in accordance with the provisions of this Act, from the land-holder or holder of any land which, in its opinion, is benefited by the construction,' ಅಷ್ಟಕ್ಕೇ ಬಿಡಲಿಲ್ಲ ಇವರು. 'construction' ಜೊತೆಗೆ "restoration, expansion or alteration of any work . . . ."

ಎಂದು ಸೇರಿಸಿದ್ದಾರೆ. ಎಂದರೆ ಇವೊತ್ತಿನ ದಿವಸ ಯಾವುದೋ ಕೆರೆಯನ್ನು ಕಟ್ಟಿದ್ದರೆ, ಅದಕ್ಕಾಗಿ 50 ರೂಪಾಯಿ ಅಥವಾ 75 ರೂಪಾಯಿ ಆಗಲೇ ತೆಗೆದುಕೊಂಡಿದ್ದು ಮತ್ತೆ ಆ ಕೆರೆಯನ್ನು ಕಟ್ಟಿದರೆ, ದೊಡ್ಡದು ಮಾಡಿದರೆ ಅಥವಾ ದುರಸ್ತು ಮಾಡಿದರೆ ಮತ್ತೆ ಅದರ ಖರ್ಚನ್ನು ವಸೂಲ್ಮಾಡುವುದಕ್ಕೆ ಅವಕಾಶವಿದೆ. ಆ ರೀತಿ ಕೆರೆಯನು ಮತ್ತೆ ದುರಸ್ತು ಮಾಡಿದಾಗ ಅಥವಾ ದೊಡ್ಡದು ಮಾಡಿದಾಗ ಎಷ್ಟು ಖರ್ಚಾಗುತ್ತದೆಯೋ ಅದನ್ನೆಲ್ಲ ಕೊಡಬೇಕು ಎಂದಿದೆ. ಇದರ ಪರಿಣಾಮವೇನಾಗುತ್ತದೆಂಬುದನ್ನು ತಾವು ಯೋಚನೆ ಮಾಡಿದಿರೋ ಅಥವಾ ಮಾಡಲಿಲ್ಲವೋ ಗೊತ್ತಿಲ್ಲ. ಈ ರೀತಿ ಮಾಡುವುದರಿಂದ ಇದು ಯಾವ ಪರಿಣಾಮವನ್ನು ಜನತೆಯಲ್ಲಿ ಉಂಟು ಮಾಡುತ್ತದೆ, ಯಾವ ರೀತಿ ಮನಸ್ಸನ್ನು ಕೆರಳಿಸುತ್ತದೆ, ಯಾವರೀತಿ ಜನರನ್ನು ಹಿಂಸಿಸುತ್ತದೆ ಎಂಬುದನು ಯೋಚನೆ ಮಾಡಿದ್ದೀರಾ ಎಂಬುದನ್ನು ನೀವೇ ಹೇಳಬೇಕು. ಒಂದು ಸಲ ಕಂಟ್ರಿಬ್ಯೂಷನ್ ಮೊಬಲಗನ್ನು ವಸೂಲ್ಮಾಡಿದ ಮೇಲೆ ಮತ್ತೊಂದು ಸಲ Channel improve ಮಾಡಿದಾಗ, ಕೆರೆ ದುರಸ್ತಿಮಾಡಿದಾಗ ವಸೂಲ್ಮಾಡುವುದರ ಜೊತೆಗೆ water rate ತೆಗೆದುಕೊಳ್ಳುತ್ತೀರಿ, ಹೀಗಿರುವಾಗ irrigation cess ವಗೈರೆ ಏಕೆ ತೆಗೆದುಕೊಳ್ಳಬೇಕು? ಇಷ್ಟೇ ಅಲ್ಲದೆ ವ್ಯವಸಾಯಗಾರರ ಮೇಲೆ ವ್ಯವಸಾಯ ವರಮಾನದ ತೆರಿಗೆಯನ್ನು ಬೇರೆ ಹಾಕಿದ್ದೀರಿ. ವ್ಯವಸಾಯಗಾರರು ಉಪಯೋಗಿಸತಕ್ಕ ಪ್ರತಿಯೊಂದು ಪದಾರ್ಥದ ಮೇಲೂ ಮಾರಾಟ ತೆರಿಗೆಯನ್ನು ಹಾಕಿದ್ದೀರಿ. ಈ ಮಸೂದೆಗೂ ಸಹ, ಅಧಿಕಾರವಿದೆ, ಬೆಂಬಲವಿದೆ ಎಂದು 'Aye' ಎಂದು ಹೇಳುತ್ತೀರಿ. ಆದರೂ ಸಹ ಎಚ್ಚರಿಕೆಯನ್ನು ಕೊಡತಕ್ಕದ್ದು ನಮ್ಮ ಜವಾಬ್ದಾರಿ ಮತ್ತು ಕರ್ತವ್ಯ. ಈ ಜವಾಬ್ದಾರಿಯನ್ನು ಸಾಧ್ಯವಾದ ಮಟ್ಟಿಗೂ ನಮ್ಮ ಶಕ್ತ್ಯನುಗುಣವಾಗಿ ಮಾಡೋಣವೆಂದಿದ್ದೇವೆ. ಆದುದರಿಂದ ಎಚ್ಚರಿಕೆಯನ್ನು ಕೊಡುತ್ತಿದ್ದೇವೆ. ಮೊನ್ನೆ ದಿವಸ ಕೆಲವರು ಹೇಳಿದರು, ವಿರೋಧಪಕ್ಷದವರು ಏನು ಕೆಲಸ ಮಾಡುವುದಕ್ಕೆ ಬಂದರೂ ಸಹಿತ ಮಾಡತಕ್ಕ ಕೆಲಸಕ್ಕೆ ವಿಘ್ನ ತರಬಾರದು'' ಎಂದು. ನಾವು ವಿಘ್ನ ತರುವುದಕ್ಕೆ ಬಂದಿಲ್ಲ. ನಿಮ್ಮವರು 150 ಜನರಿದ್ದಾರೆ. ಒಂದು ತೇರನ್ನು ಎಳೆಯುವಂತೆ ನೀವು ಆಡಳಿತವನ್ನು ನಡೆಸುತ್ತಿದ್ದೀರಿ. ಆದರೆ ತೇರನ್ನು ಎಳೆದುಕೊಂಡು ಹೋಗುವಾಗ ತೇರಿನ ಕಡೆಗೆ ನಿಮ್ಮ ಗಮನವೇ ಇಲ್ಲ. ಅದು ಎತ್ತಕಡೆ ಹೋಗುತ್ತಿದೆ ಎಂಬುದನ್ನೂ ಸಹ ನೋಡದೆ ಶಕ್ತಿ ಇದೆ ಎಂದು ಎಳೆಯುತ್ತಿದ್ದೀರಿ. ಹೀಗೆ ಎಳೆಯುವಾಗ ತೇರು ಇತರರ ಮೇಲೆ ಹರಿದೀತು ಎಂದು ತೇರಿಗೆ ಪಕ್ಕದಲ್ಲಿ ಕೋಲನ್ನೂ ಮರದ ತುಂಡುಗಳನ್ನೂ ಹಿಡಿದುಕೊಂಡು ಕಾದಿರುವಂತೆ ನಾವೂ ಸಹ ಕೋಲನ್ನು ಹಿಡಿದುಕೊಂಡು ಕುಳಿತಿದ್ದೇವೆ. ಈ ರೀತಿ ಕುಳಿತಿದ್ದರೂ ಸಹ ಬಲವಾಗಿ, ಶಕ್ತಿಯನ್ನೆಲ್ಲ ಉಪಯೋಗಿಸಿ ತೇರನ್ನು ಅವರ ಮೇಲೆ ಏರಿಸಿಕೊಂಡು ಹೋದರೆ ನಾಲ್ಕಾರು ಜನ ಸತ್ತರೆ ದುರದೃಷ್ಟವಶಾತ್ ಹಾಗಾಯಿತು, ಪೋಲೀಸಿನವರು ಏನು ಮಾಡುವುದಕ್ಕಾಗುತ್ತದೆ ಎಂದು, ಭದ್ರಾವತಿಯಲ್ಲಿ ನಡೆದ ಘಟನೆಯ ವಿಷಯವಾಗಿ ಹೇಳಿದಂತೆ ಆಗುತ್ತದೆ. ಆದುದರಿಂದ ನಾವು ಈ ವಿಷಯವನ್ನು ಯೋಚನೆ ಮಾಡಬೇಕಾಗಿದೆ. ಕೆರೆ ಕಟ್ಟುವುದಕ್ಕೋಸ್ಕರ ಮಾತ್ರವಲ್ಲ, ಮುಂದೆ ಅದನ್ನು ಇಂಪ್ರೂವ್ ಮಾಡಿದರೆ, ಮಾರ್ಪಾಡುಮಾಡಿದರೆ ಅಥವ ವಿಸ್ತರಣೆಮಾಡಿದರೆ ಅದಕ್ಕೆಲ್ಲ ದುಡ್ಡು ಕೊಡಬೇಕಾಗಿದೆ, ಇದರ ಪ್ರಕಾರ. ಆದುದರಿಂದ ತಾವು ಇದನ್ನು ತೀವ್ರಾಸಕ್ತಿಯಿಂದ ಆಲೋಚನೆ ಮಾಡಿ, ಇದು ಸರಿಯಾಗಿದೆಯೋ, ಇದು ಧರ್ಮವೇ ಎಂದು ನೋಡಬೇಕು. ಈ ಮಸೂದೆಯೇನೋ ಸೆಲೆಕ್ಟ್ ಕಮಿಟಿಯಲ್ಲಿ ಪರಿಶೀಲನೆಯಾಗಿ ಬಂದಿದೆ ಎಂದ ಮಾತ್ರಕ್ಕೆ ನಮ್ಮ ಬಾಯಿ ಕಟ್ಟಿಲ್ಲ. ನಮ್ಮವರು ಆ ಸಮಿತಿಯಲ್ಲಿದ್ದಿದ್ದರೆ ಬಾಯಿಕಟ್ಟುತ್ತಿತ್ತೋ ಏನೋ, ಈಗಂತೂ ಕಟ್ಟಿಲ್ಲ. ನಾನು ಕೆಲವರಿಗೆ ಒಂದು ಅಭಿಪ್ರಾಯವನ್ನು ಕೊಡುತ್ತಿದ್ದೆ. ಒಂದು ಸಲ ಮಾಡಿದ ತೀರ್ಮಾನವನ್ನು ಬದಲಾವಣೆ ಮಾಡತಕ್ಕದ್ದು ಕಾನೂನು ರಚನಾಕ್ರಮದಲ್ಲಿ ಒಂದು ಲೋಪವೆಂದು ಹೇಳುತ್ತೇನೆ. ಏಕೆಂದರೆ ಜೂರಿಸ್‌ಪ್ರುಡೆನ್ಸ್‌ನಲ್ಲಿ ಪ್ರತಿಯೊಂದೂ ಅಭ್ಯಾಸದ ಮೂಲಕ ಜನರಿಗೆ ಬರಬೇಕು ಮತ್ತು ಅದನ್ನು ಮರೆಯತಕ್ಕ ಶಕ್ತಿ ಅಥವಾ ಸನ್ನಿವೇಶವಿರಬಾರದು ಎಂದು ಹೇಳಿದೆ. ಅದೇ ಒಂದು ಗುಣವಾಗಿ ಬಿಡುವ, ದುಷ್ಪರಿಣಾಮವಾಗಿ ಬಿಡುವ ಅಭ್ಯಾಸ ಬರುತ್ತದೆ. ಯಾವುದನ್ನೇ ಆಗಲಿ ಪದೇ ಪದೇ ಬದಲಾವಣೆ ಮಾಡುವುದರಿಂದ ಜನಗಳಿಗೆ ತೊಂದರೆಯಾಗುತ್ತದೆ. ಮೊನ್ನೆ ತಾನೇ ಸದಸ್ಯರ ಸಂಬಳಗಳಿಗೆ ಸಂಬಂಧಪಟ್ಟ ಮಸೂದೆಯು ಪಾಸಾಯಿತು. ಇದನ್ನು 1952ರಲ್ಲಿ ಮೊದಲು ತಿದ್ದು

(ಶ್ರೀ ಕೆ. ಕೆಂಚಪ್ಪ)

ಪಾಟು ಮಾಡಿದರು, ಮತ್ತೆ 1954ರಲ್ಲಿ ಬದಲಾವಣೆ ಮಾಡಿದರು. 1956ರಲ್ಲಿ ಇನ್ನೂ ಒಂದು ಸಲ ಬದಲಾಯಿಸಿದರು. ಈಗ ಅದನ್ನು ಪುನಃ ಬದಲಾಯಿಸಿ ಸದಸ್ಯರಿಗೆ ದಿನ ಒಂದಕ್ಕೆ ಹದಿನಾರು ರೂಪಾಯಿ ಭತ್ಯ ಮತ್ತು ಉಚಿತ ಸ್ಥಳ ಕೊಡಬೇಕು ಎಂದು ಮಾಡಿದ್ದಾರೆ. ಹೀಗೆ ಒಂದೊಂದು ಸಲ ಒಂದೊಂದು ರೀತಿ ಯೋಚನೆ ಮಾಡಿಕೊಂಡು ಬದಲಾಯಿಸಬಾರದು. ಕಾನೂನು ರಚನೆ ಮಾಡತಕ ವರು ಪದೇಪದೇ ವ್ಯತ್ಯಾಸ ಮಾಡತಕ್ಕ ಹವ್ಯಾಸಕ್ಕೆ ಹೋಗಬಾರದು.

ಈ ಕಾನೂನಿನಲ್ಲಿ ಪ್ರತಿಯೊಂದು ಅಧಿಕಾರವನ್ನೂ ಕಲೆಕ್ಟರ್ ಅವರಿಗೆ ಕೊಡಲಾಗಿದೆ. ಹಿಂದೆ ನಾನು ಏನು ಹೇಳಿದ್ದೆನೋ ಅದನ್ನೇ ಈಗಲೂ ಹೇಳುತ್ತೇನೆ. ಕಲೆಕ್ಟರ್ ಆದವರು ಇಷ್ಟು ಕಂಟ್ರಿಬ್ಯೂಷನ್ ಕೊಡಬೇಕು, ಇಷ್ಟು ವಾಟರ್‌ರೇಟ್ ಕೊಡಬೇಕು ಎಂದು ಮಾಡಬಾರದು. ಈ ಕೆಲಸವನ್ನು ಸರ್ವೆ ಇಲಾಖೆಗೆ ವಹಿಸಬೇಕು. ಮದರಾಸ್ ಕಾನೂನು ಎಂದು ಏನಿದೆ, ಅದನ್ನೇ ಅಕ್ಷರಶಃ ಪ್ರತಿಯೊಂದನ್ನೂ ಇದರಲ್ಲಿ ಬರೆದಿದ್ದಾರೆ. ಆದರೆ ಹೀಗೆ ಮಾಡುವಾಗ ಅಲ್ಲಲ್ಲಿ ಬಿಟ್ಟುಬಿಟ್ಟು ಇವರಿಗೆ ಸೂಕ್ತಾನುಸಾರವಾಗಿ ಇದರಲ್ಲಿ ಸೇರಿಸಿದ್ದಾರೆ. ಇದರಲ್ಲಿನ ಮೂರನೆ ಸೆಕ್ಷನ್ ಯಾವ ರೀತಿ ಇದೆ ಎಂದು ಓದುತ್ತೇನೆ.

Section 3.—Levy of betterment contribution.

"The Government shall be entitled to levy a betterment contribution, in accordance with the provisions of this Act, from the landholder of.......... .... .. *the cost of which exceeds twenty-five thousand rupees*"

ಇದನ್ನು ಮಾತ್ರ ಏಕೆ ಬಿಟ್ಟಿದ್ದಾರೆ. ಇದರಲ್ಲಿ 25 ಸಾವಿರ ರೂಪಾಯಿಗಳಿಗೆ ಕಡಮೆ ಇಲ್ಲದಂತೆ ಖರ್ಚು ಮಾಡಿರತಕ್ಕ ಕೆಲಸಕಾರ್ಯಗಳಿಗೆ ಮಾತ್ರ ಈ betterment levy applicable ಎನ್ನತಕ್ಕದ್ದನ್ನು ಉಳಿಕೆ ಮಾಡಿಕೊಂಡಿದ್ದಾರೆ. ಪ್ರತಿಯೊಂದು ಅಕ್ಷರ, ಪದ, ವಾಕ್ಯ, ಕ್ರಿಯಾಪದ ಎಲ್ಲವನ್ನೂ ಉಪಯೋಗಿಸಿದವರು 25 ಸಾವಿರ ರೂಪಾಯಿಗಳಿಗೆ ಕಡಮೆ ಇಲ್ಲದಿದ್ದರೆ ಎಂಬುದನ್ನು ಮಾತ್ರ ಏಕೆ ಕೈಬಿಟ್ಟರು ಎಂದು ದಯವಿಟ್ಟು ಹೇಳಬಲ್ಲರೇ? ಡೆಪ್ಯುಟಿ ಕಮಿಷನರಿಗೆ ಏಕೆ ಕಂಟ್ರಿಬ್ಯೂಷನ್ ನಿಗದಿ ಮಾಡತಕ್ಕ ಅಧಿಕಾರವನ್ನು ಕೊಟ್ಟಿದ್ದಾರೆ? ಮದರಾಸು ಆಕ್ಟಿನಲ್ಲಿ ಯಾವರೀತಿಯಾಗಿ ಕಂಟ್ರಿಬ್ಯೂಷನ್ ಮೊಬಲಗನ್ನು ನಿಗದಿಮಾಡಬೇಕು ಎನ್ನುವುದರಲ್ಲಿ 500 ರೂಪಾಯಿ ಎಂದು ಹಾಕಿದ್ದಾರೇನು? ಅಲ್ಲಿ ಆ ರೀತಿ ಹಾಕಿಲ್ಲ. ಯಥಾಪ್ರಕಾರ ಸರ್ವೆ ಇಲಾಖೆಯವರು ಇದನ್ನು ಮಾಡಬೇಕು. ಅದರಲ್ಲಿಯೂ ಸಹಿತ ಒಂದು ವೇಳೆ ಅವರು ನೀರನ್ನು ಒದಗಿಸದೆ ಇರತಕ್ಕ ಜಮೀನಿಗೆ ನೀರನ್ನು ಒದಗಿಸಿದರೆ ಆ ಜಮೀನಿಗೆ ಯಾವರೀತಿ ಕಂದಾಯ ಹಾಕಬೇಕು ಎನ್ನುವುದರಲ್ಲಿ ಹೀಗೆ ಹೇಳಿದ್ದಾರೆ. ಅದನ್ನು ಓದುತ್ತೇನೆ. ತಾವು ದಯವಿಟ್ಟು ಕೇಳಬೇಕು.

"Provided that in the case of lands which were originally under dry cultivation and which, with a view to derive benefit from the work, were brought under wet cultivation, a sum representing the difference between the cost of wet cultivation and the cost of dry cultivation as determined in the prescribed manner shall be deducted from the increase in gross produce for the purpose of calculating the increase in capital value of those lands."

ಇದು ಈ ಬಿಲ್ಲಿನಲ್ಲಿ ಎಲ್ಲಿದೆ, ಸ್ವಾಮಿ. ಇದನ್ನು ಏಕೆ ಬಿಡಲಾಗಿದೆ ಎಂದು ಹೇಳಲು ಸಾಧ್ಯವೇ? ಪ್ರತಿಯೊಂದು ಭಾಗದಲ್ಲಿರುವುದನ್ನೂ ಸಮನ್ವಯ ಮಾಡಿದ್ದೇವೆ ದು ಹೇಳಿ ಬೊಂಬಾಯಿ ಕಾನೂನಿನಲ್ಲಿ ಅನುಕೂಲವಾಗಿರುವುದನ್ನು ಒಂದನ್ನು ಹೇಳುವುದು, ಮತ್ತೊಂದು ಕಡೆಯಲ್ಲಿರುವುದರಲ್ಲಿ ಅನುಕೂಲವಾಗಿರುವುದನ್ನು ಹೇಳುವುದು ಈ ರೀತಿ ಮಾಡಿದ್ದಾರೆ. ಇದು ಯಾವ ರೀತಿ ಇದೆ ಎಂದರೆ ಬೇಳೇಕಾಳು, ಉಪ್ಪು, ಹುಳಿ, ಖಾರ ಎಲ್ಲ ಹಾಕಿ ಸಾರನ್ನು ಮಾಡಿ ತಿಳಿಸಾರನ್ನು ಕೊಡುವ ಹಾಗೆ ಇದನ್ನು ಇಲ್ಲಿ ಕೊಟ್ಟಿದ್ದಾರೆ ಎಂದು ನಾನು ಹೇಳುತ್ತೇನೆ.

ಶ್ರೀ ಎಚ್. ಎಸ್. ರುದ್ರಪ್ಪ.—ತಿಳಿಸಾರೋ, ಗಟ್ಟಿಸಾರೋ.

ಶ್ರೀ ಕೆ. ಕೆಂಚಪ್ಪ.—ಅದನ್ನು ತಾವೇ ಹೇಳುವುದರ ಮೂಲಕ ತಮ್ಮನ್ನು ಸಮರ್ಥನೆ ಮಾಡಿಕೊಳ್ಳಬೇಕಾಗಿದೆ. ಆದುದರಿಂದ ತಾವು ಒಂದು ವಿಷಯವನ್ನು ಆಲೋಚನೆ ಮಾಡಬೇಕು, ಏನೆಂದರೆ ಯಾವ ರೀತಿಯಾಗಿ ಇದರಿಂದ ಪ್ರಜೆಗಳಿಗೆ ಅನುಕೂಲವಾಗುತ್ತದೆ ಮತ್ತು ಯಾವರೀತಿ ಪ್ರಜೆಗಳ ಅನುಕೂಲಕ್ಕೋಸ್ಕರ ತಂದಿದ್ದೀರಿ ಎಂದು. ಇಲ್ಲಿ ತಾವೂ ನಾಲ್ಕು ವರ್ಷಗಳ ಕಾಲ ಇರುತ್ತೀರಿ, ನಾನೂ ಇರುತ್ತೇನೆ. ಆದರೆ ಮಾಡುವ ಕಾರ್ಯ ಶಾಶ್ವತವಾಗಿ ಉಳಿಯುತ್ತದೆ. ಸರ್ಕಾರದವರು ಜವಾಬ್ದಾರಿ ಅರಿತುಕೊಂಡು ಈ ಶಾಸನವನ್ನು ತಂದಿದ್ದಾರೆಯೇ ಎಂದು ಕೇಳುತ್ತಿದ್ದೇನೆ. ನಿಜವಾಗಿಯೂ ಇದನ್ನು ಸಮರ್ಥನೆ ಮಾಡಿಕೊಳ್ಳಬಲ್ಲರೇ? ಇದಕ್ಕೆ ಮಾನ್ಯ ಮಂತ್ರಿಗಳು ಉತ್ತರಕೊಡಬೇಕು. ಆದ್ದರಿಂದ ಈ ಕಲೆಕ್ಟರ ಪದವನ್ನು ಅಮೆಂಡ್‌ಮೆಂಟ್ ಮಾಡಲು ಒಂದು ತಿದ್ದುಪಡಿ ಕಳುಹಿಸಿದ್ದೇನೆ. ಪ್ರತಿಯೊಂದು ವಿಷಯದಲ್ಲೂ ನನ್ನ ಭಾವನೆಯನ್ನು ಹೊರಪಡಿಸಿದ್ದೇನೆ. ಈಗಲೂ ಸಹ ಯೋಚನೆ ಮಾಡಬೇಕಾಗಿದೆ. ಇನ್ನೂ ನಾಲ್ಕು ದಿವಸಗಳಿವೆ. ತಾವೂ ಸಹ ಆಲೋಚನೆಮಾಡಿ. ಯಾವ ರೀತಿಯಿಂದ ನೀವು ಸುಖೀ ರಾಜ್ಯವನ್ನು ಹಿಡಿದು ಗಾಂಧಿ ತತ್ವವನ್ನು ಸ್ಥಾಪನೆ ಮಾಡುತ್ತಿದ್ದೀರಿ? 1948ನೆಯ ಇಸ್ವಿಯಿಂದೀಚೆಗೆ ಸಮಾಜವಾದಿ ತತ್ವವನ್ನು ಸಮರ್ಥನೆ ಮಾಡುತ್ತಿದ್ದೀರಿ. ಈಗಿನ ಸಮಾಜವಾದವೋ ಹಿಂದಿನ ಸಮಾಜವಾದವೋ ಗೊತ್ತಿಲ್ಲ. ಅದರ ತಿರುಳು ಏನು, ತತ್ವವೇನು ಎಂಬುದಕ್ಕೆ ಹೋಗುವುದಿಲ್ಲ. ನೀತಿ ಏನು ಎಂದು ಪಬ್ಲಿಕ್‌ನಲ್ಲಿ ಹೇಳಬೇಕಾಗಿದೆ. ಮಂತ್ರಿಗಳೂ ಪಬ್ಲಿಕ್ ಏಜೆಂಟರು, ನಾವೂ ಪಬ್ಲಿಕಿನ ಏಜೆಂಟರು. ಅವರ ಹಿತರಕ್ಷಣೆಗೋಸ್ಕರ for the benefit of the public, we exist. ಆದ್ದರಿಂದ ಅವರ ವಿಚಾರದಲ್ಲಿ ಯಾವ ರೀತಿ ಕಳಕಳಿಯಿಂದ ಯೋಚನೆಮಾಡುತ್ತಿದ್ದೇವೆ ಎಂಬುದನ್ನು ಶಾಸನವನ್ನು ತಂದಾಗ ಆಲೋಚನೆ

ಮಾಡಬೇಕಾಗಿದೆ. ನಾನು ಅದನ್ನು ಹೇಳದೆ ಹೋದರೆ ಕರ್ತವ್ಯಲೋಪವಾಗುತ್ತದೆ. ತಾವು ಯೋಚಿಸಿನೆಮಾಡಿ. ಜನ ಏನೆನ್ನುತ್ತಾರೆ ಎಂಬುದನ್ನು ತಮ್ಮ ಗಮನಕ್ಕೆ ತರುತ್ತೇನೆ. 1939ನೆಯ ಇಸ್ವಿಯಲ್ಲಿ ಸರ್ಕಾರದವರು ಶಾಸನ ಸಭೆಯಲ್ಲಿ ಒಂದು ಶಾಸನವನ್ನು ತಂದರು. ಆಗ ಕಾಂಗ್ರೆಸ್ಸಿನವರು ಕೆಲವರು ಪುಂಡುಗಾರಿಕೆ ಕೆಲಸವನ್ನು ಮಾಡುತ್ತಿದ್ದಾರೆ, ಒಂದು ಬಂದೋಬಸ್ತು ಇಡಬೇಕಾಗುತ್ತದೆ, ಅದಕ್ಕೋಸ್ಕರ ಪಬ್ಲಿಕ್ ಸೇಫ್ಟಿ ಆಕ್ಟ್ ತರುತ್ತೇವೆ ಎಂದು ಹೇಳಿದರು. ಆಗ ವಿರೋಧ ಮಾಡಿರುವ ಕಾಂಗ್ರೆಸ್ಸಿನವರು ಮತ್ತು ಈಗಿರುವ ಕಾಂಗ್ರೆಸ್ಸಿನವರು ಬೇರೆಯೋ, ಆಗಿದ್ದ ರುದ್ರಪ್ಪನವರು ಬೇರೆಯೋ, ಏನೋ, ಯಾರಿಗೆ ಗೊತ್ತು?

Sri H. S. RUDRAPPA.—We have gained in knowledge.

Sri K. KENCHAPPA.—On the other hand, you have diverted yourself from that path and taken a different path, by which you are establishing that you have taken a wrong path then and the step you are taking now is right. Is that the stand?

Sri H. S. RUDRAPPA.—The stand that is taken is to create more facilities and advantages.

Sri K. KENCHAPPA.—That should have been the stand then also *i.e.*, of creating facilities. How could you create the facilities now? ಅವೊತ್ತಿನ ದಿವಸ ಯಾರು ಆ ಕಾನೂನನ್ನು ನಾಗರಿಕರ ದೇಶದಲ್ಲಿ ತಕ್ಕ ಕಾನೂನಲ್ಲ, ಜಂಗಲ್‌ಲಾ, ಕಾಡು ಮನುಷ್ಯರಿಗೆ ಉಪಯೋಗಿಸುವ ಕಾನೂನು ಎಂದು ಬದಲಾವಣೆ ಮಾಡಬೇಕೆಂದು ಹೇಳುತ್ತಿದ್ದರೋ, ಅವರೇ ಮಾಡಿದ್ದಾರೆ. ಇವೊತ್ತು ಸಮರ್ಥನೆಮಾಡುವ ಬುದ್ಧಿ ನಮ್ಮ ಮಂತ್ರಿಗಳಿಗೆ ಬಂದಿದೆ. ಕಾಲಗತಿ ಬದಲಾವಣೆ ಆಗುವಂತೆ ಕಾನೂನುಗಳು ಬದಲಾವಣೆ ಆಗುವ ವಾದವನ್ನು ಹೂಡುತ್ತಿದ್ದಾರೋ ಏನೋ ಗೊತ್ತಿಲ್ಲ. ಏತಕ್ಕೆಂದರೆ, Elementary principles guiding those at the helm of affairs should continue. ಎಂದರೆ ಬಹಳ ಸೂಕ್ಷ್ಮವಾಗಿ ಇರತಕ್ಕ ಒಂದು ತತ್ವದ ವಿಚಾರದಲ್ಲಿ ಭಿನ್ನಾಭಿಪ್ರಾಯ ಬರಬಹುದು, ಸಾಧಾರಣವಾದ ವಿಚಾರದಲ್ಲಿ ಭಿನ್ನಾಭಿಪ್ರಾಯ ಬರುವುದಿಲ್ಲ— ಎನ್ನುವ ತತ್ವಕ್ಕೆ ಇವತ್ತಿನ ದಿವಸ ತಾವು ವಿರೋಧಿಸಿದ್ದೀರೋ ಏನೋ ಗೊತ್ತಿಲ್ಲ. ತಂದೆ ತಾಯಿಗಳಲ್ಲಿ ಭಕ್ತಿ ಇಡು, ಗುರುಹಿರಿಯರಲ್ಲಿ ಭಕ್ತಿ ಇಡು, ಎನ್ನುವಂಥ ಒಂದುಮಾರ್ಗ ಹಿಂದೆ ಇತ್ತು. ಈಗ ದುಡ್ಡು ಕೊಟ್ಟರೆ ಪಾಠ ಹೇಳುತ್ತೇನೆ ಎಂದು ಹೇಳುತ್ತಾರೆ. ಏತಕ್ಕೆ ಹೇಳುತ್ತೇನೆಂದರೆ ಈ ಬಿಲ್ಲನ್ನು ಬಹಳ ಜವಾಬ್ದಾರಿಯಿಂದ ತಂದಿಲ್ಲ. ಈ ರೀತಿ ಜವಾಬ್ದಾರಿಯಿಲ್ಲದೆ ಇಂಥಾ ಬಿಲ್ಲನ್ನು ತಂದು ಅದನ್ನು ಬದಲಾವಣೆ ಮಾಡಿದ್ದರೆ ಜನ ಅದನ್ನು ಅಲ್ಲಗಳೆಯುತ್ತಾರೋ ಏನೋ ಎನ್ನುವುದನ್ನು ಅರಿತುಕೊಂಡು ತಂದಿಲ್ಲ ಎಂದು ಹೇಳಬೇಕಾಗಿದೆ. ಮೂರು ದಿವಸಗಳನ್ನು ಈ ಬಿಲ್ಲಿನ ಚರ್ಚೆಗೆ ಕೊಟ್ಟಿದ್ದಾರೆ. ಇದಕ್ಕೆ ಮಹತ್ವ ಕೊಡಬೇಕು. ನಮ್ಮದು ಶೇಕಡ 90 ಜನ ವ್ಯವಸಾಯಗಾರರು ಇರತಕ್ಕ ದೇಶ. ಅವರು ನಮ್ಮ ಸಹೋದರರು. ಅವರ ಮೇಲೆ ಈಗಾಗಲೇ ಬಹಳ ತೆರಿಗೆಗಳನ್ನು ಹಾಕಿದ್ದೇವೆ. ಇಷ್ಟು ತೆರಿಗೆಗಳನ್ನು ಹಾಕಿದ ಮೇಲೆ ಮತ್ತು ಟ್ಯಾಕ್ಸ್ ಅಥವಾ ಚಾರ್ಜು ಹಾಕಿದರೆ ಹೇಗೆ? ತಮ್ಮ ರಾಜ್ಯಭಾರವನ್ನು ವಿಚಕ್ಷಣೆಯಿಂದ ನಡೆಸಿ ದೇಶದ ಪ್ರಜೆಗಳ ಉತ್ಪತ್ತಿ ಎಷ್ಟರ ಮಟ್ಟಿಗೆ ಹೆಚ್ಚಾಗಿದೆ ಎಂಬುದಕ್ಕೆ ಏನಾದರೂ ಸ್ಟ್ಯಾಟಿಸ್ಟಿಕ್ಸ್ ಇಟ್ಟಿದ್ದಾರೆಯೋ?

ಶ್ರೀ ಎ. ವಿ. ನರಸಿಂಹರೆಡ್ಡಿ (ಬೆಂಗಳೂರು ದಕ್ಷಿಣ).—ನಮ್ಮಲ್ಲಿ ಅದರ ಬಗ್ಗೆ ಪುಸ್ತಕ ಇದೆ.

ಶ್ರೀ ಕೆ. ಕೆಂಚಪ್ಪ.—ಮೊನ್ನೆ ಫುಡ್ ಎನ್‌ಕ್ವೈರಿ ಕಮಿಟಿಯವರು ಬಂದಾಗ ಹೇಳಿದ್ದಾರೆ. ಅವರು ಸರಿಯಾಗಿ ಹೇಳಿದ್ದಾರೆ. ಸುಮ್ಮನೆ ಇದನ್ನು ಹೇಳಬೇಕು ಎಂದರೆ ಏನು ಪ್ರಯೋಜನ? ನಾವು ನಮ್ಮ ಆತ್ಮವನ್ನು ಪರಿಶೋಧನೆಮಾಡುವ ಕಾಲ ಬಂದಿದೆ. ಬೂಟಾಟಿಕೆ ಪದ ಹೆಚ್ಚಿಗೆ ಉಪಯೋಗಿಸುವುದರಿಂದ ತಿರುಗಿ ತಿರುಗಿ ಅದನ್ನು ಹೇಳುವ ಹವ್ಯಾಸಕ್ಕೆ ಹೋಗುವುದಿಲ್ಲ. ಜನರನ್ನು ಮೆಚ್ಚಿಸುವುದು ಭ್ರಾಂತಿಯ ಮಾತು ಏಕೆಂದರೆ ಈ ಬಿಲ್ಲನ್ನು ಇಷ್ಟರಮಟ್ಟಿಗೆ ತಂದಿರುವುದರಿಂದ ಇವರಿಗೆ ಯಾರ ಹಿತ ಚಿಂತನೆಯೂ ಇಲ್ಲ. ಇಲ್ಲಿ ಬ್ಯೂರಾಕ್ರಿಟಿಕ್ ಸರ್ಕಾರ ಸ್ಥಾಪನೆಮಾಡಲು ಹೊರಟಿದ್ದಾರೆಂದು ವಿಷಾದದಿಂದ ಹೇಳಬೇಕಾಗಿದೆ.

Sri H. S. RUDRAPPA.—By the construction of tanks and reservoirs everybody will be benefited, not the Congress people alone.

Sri K. KENCHAPPA.—I know they will be benefited, but because it is beneficial, you cannot tax. You should not think in terms of getting a return. You should not think in terms of making profit or getting income to the Government. It is unlawful and unreasonable. It is unconscionable. It is a thing which cannot be supported by consistency or logic. Now, this word logic cannot be explained properly in Kannada. ಅದರಿಂದ ನಾನು ಹೇಳುತ್ತೇನೆ ಅದರಲ್ಲಿ ಯಾವ ಲಾಜಿಕ್ ಇದೆ? ಲಾಜಿಕ್ ಎಂದರೆ ಕನ್ನಡದಲ್ಲಿ ತರ್ಕಶಾಸ್ತ್ರ ಎಂದು ಆಗುತ್ತದೆ. According to the principles of logic, when we define a word it should have a true sense, so that it can have a correct meaning. Have you used or defined the words correctly? It is logic and reason that convince a person. Logic has not been the criterion in defining words in this Bill ಆದ್ದರಿಂದ ತಾವು ಯೋಚನೆ ಮಾಡಬೇಕಾಗಿದೆ. ಯಾವ ರೀತಿ ಮಿಸ್‌ಲೀಡ್ ಮಾಡುತ್ತಿದ್ದಾರೆ, ಯಾವ ರೀತಿ ಪದಗಳನ್ನು ಉಪಯೋಗಿಸುತ್ತಿದ್ದಾರೆ ಎಂದು ಯೋಚನೆ ಮಾಡಿದರೆ ತಮಗೆ ಅರ್ಥವಾಗುತ್ತದೆ. ಆದ್ದರಿಂದ ನಾನು ಹೆಚ್ಚಿಗೆ ಹೇಳುವುದಕ್ಕೆ ಹೋಗುವುದಿಲ್ಲ. ನಾನು ಮೊದಲು ಹೇಳಿದ್ದು ಏನೆಂದರೆ ಕಲೆಕ್ಟರನ್ನು ಮೊದಲು ತಪ್ಪಿಸಿ. ಕಲೆಕ್ಟರನ್ನು ತಪ್ಪಿಸದಿದ್ದರೆ ಶಾಂತಿ ಬರುವುದಿಲ್ಲ. ನಮಗೆ ಗೌರವ ಬರುವುದಿಲ್ಲ. A Collector is a collector. You cannot give any other meaning. A Surveyor is a person who surveys, classifies and fixes assessment. Classification is a big word. ಕ್ಲಾಸಿಫಿಕೇ

(SRI K. KENCHAPPA)

ಷನ್ ಪದಕ್ಕೆ ಸರಿಯಾದ ಅರ್ಥ ಕೊಡಬೇಕು. Survey manual ನಲ್ಲಿ ಏನು ಅರ್ಥ ಕೊಟ್ಟಿದ್ದಾರೋ ಅದಕ್ಕೆ ಮಾನ್ಯತೆ ಕೊಡಬೇಕಾಗಿದೆ. ನಿಜವಾಗಿ ಈ ಮಸೂದೆಯು ನ್ನು ತರಲು ತಮ್ಮಲ್ಲಿ ಮಾನ್ಯತೆ ಇದೆಯೇ ಎಂಬುದನ್ನು ಪ್ರಶ್ನೆ ಮಾಡುತ್ತೇನೆ. ಸರ್ವೆ ಡಿಪಾರ್ಟ್‌ಮೆಂಟನ್ನು ವಜಾ ಮಾಡುವುದಕ್ಕೆ ಹೊರಟಿದ್ದೀರಿ. ಏತಕ್ಕೆ ಸರ್ವೆ ಡಿಪಾರ್ಟ್‌ಮೆಂಟ್ ಇಟ್ಟಿದ್ದೀರಿ ? ಅದಕ್ಕೆ ತಾವು ಉತ್ತರ ಕೊಡಬೇಕು. ಹಿಂದೆ ನಮ್ಮ ಕಾನೂನಿನಲ್ಲಿ ಏನು ಇತ್ತು ಎನ್ನುವ ವಿಚಾರವನ್ನು ಹೇಳುತ್ತೇನೆ.

ಹಿಂದೆ ನಮ್ಮ ಲ್ಯಾಂಡ್‌ರೆವಿನ್ಯೂ ಕೋಡಿನ ಸೆಕ್ಷನ್ 53ರಲ್ಲಿ ಏನಿತ್ತೋ ಅದನ್ನು ಈಗ ನೀವು ವಜಾಮಾಡುವುದಕ್ಕೆ ಹೊರಟಿದ್ದೀರಿ. You are thinking in terms of repealing that section. ಅದಕ್ಕೆ ಹೇಳುತ್ತೇನೆ. The Government may authorise the Deputy Commissioner or the officer in charge of the survey, ಇದನ್ನು ಏಕೆ ಹೇಳುತ್ತೇನೆ ಎಂದರೆ Officer in charge of the survey ಎನ್ನುವುದು ಲ್ಯಾಂಡ್‌ರೆವಿನ್ಯೂ ಕೋಡಿನ IIIನೇ ಸೆಕ್ಷನ್‌ನಲ್ಲಿ ತಾವು ನೋಡಬೇಕು. IIIನೇ ಸೆಕ್ಷನ್‌ನ ಎರಡನೆ ಕ್ಲಾಸಿನಲ್ಲಿ "the power to assess". The word used is "assess". Again it is a question of assessment according to the rules prescribed in the Survey Manual.

> "The power to assess under this section shall, in the case of lands used for purposes of agriculture alone, include power to assess, whether directly on the land, or in the form of a rate or cess upon the means of irrigation. . ."

ಇದು ಇರಿಗೇಷನ್‌ಗೆ ಸಂಬಂಧವಿಲ್ಲ ಎಂದು ತಾವು ಹೇಳಬಹುದು. ಸರ್ವೆ ಡಿಪಾರ್ಟ್‌ಮೆಂಟಿಗೂ, ಇರಿಗೇಷನ್‌ಗೂ ಸಂಬಂಧವಿಲ್ಲ ಎಂದು ತಾವು ಹೇಳುತ್ತೀರೋ ಏನೋ ? ಅಂತು ಅದು ಲ್ಯಾಂಡ್ ರೆವಿನ್ಯೂ ಆಕ್ಟ್‌ನಲ್ಲಿ ಇದೆ. ಆದರೂ ಸಹಿತ ಈ ಎಚ್ಚರಿಕೆ ಕೊಡುವುದು ನನ್ನ ಕರ್ತವ್ಯವಾಗಿರುವುದರಿಂದ ನಾನು ಈಗ ಹೇಳುತ್ತಾ ಇದ್ದೇನೆ. ಇರಿಗೇಷನ್ ಆಕ್ಟ್ ವಗೈರೆ ಯಾವುದನ್ನು ಹೇಳುವಾಗಲೂ ಸಹಿತ ಸರ್ವೇ ಮ್ಯಾನ್ಯುಯಲ್ ಪ್ರಕಾರ ನಿಗದಿ ಮಾಡಿರುತ್ತಾರೆಯಲ್ಲಾ ಅದು ಎಷ್ಟೋ ಸೆಕ್ಷನ್‌ಗಳಲ್ಲಿ ಇದೆ. ಲ್ಯಾಂಡ್‌ರೆವಿನ್ಯೂ ಮ್ಯಾನ್ಯುಯಲ್‌ನಲ್ಲಿ ಇರುವ ಪ್ರಕಾರ ಒಂದು ಜಮೀನು ಅಳತೆಮಾಡಿ ಅಂತರ ನಿಗದಿಮಾಡುವಾಗ, ನಿಗದಿಯಾದ ಕ್ರಮವನ್ನು ಅನುಸರಿಸಿದ್ದಾರೆಯಲ್ಲಾ ಅದರಮೇಲೆ ಸರ್ಕಾರದ ಅನುಮತಿ ಪಡೆದು ಆಮೇಲೆ ಮಾಡಬೇಕೆಂದು ಇದೆ. Assessment fixed by the officer in charge of survey shall not be levied without the sanction of Government. ಸ್ವಾಮಿ sanction of the Government ಬೇಕು ಎಂದು ರೂಲಿಂಗ್ ಕೊಟ್ಟಿದ್ದಾರೆ. ರೂಲ್‌ಮಾಡುವಾಗ ಆ ರೂಲ್‌ಗಳನ್ನೆಲ್ಲಾ ನಮ್ಮ ಮುಂದೆ ಇಡುತ್ತಾ ಇದ್ದರು. ಅದರವೇಲೆ ಬೇಕಾದಷ್ಟು ಚರ್ಚೆಗೆ ಅವಕಾಶ ಕೊಡುತ್ತಾ ಇದ್ದರು. ಹಿಂದೆ ಬೇಜವಾಬ್ದಾರಿ ಸರ್ಕಾರ ಎಂದು ಅನ್ನುತ್ತಾ ಇದ್ದೆವಲ್ಲಾ ಅವರು ಇಷ್ಟೆಲ್ಲಾ ಮಾಡಿದಾರೆ. ಮತ್ತು ಒಂದೆರಡು ದೊಡ್ಡ ದೊಡ್ಡ ಪುಸ್ತಕಗಳನ್ನು ಬರೆದು ಹೀಗೆ ಹೀಗೆ ಮಾಡಬೇಕು, ಹೀಗೆ ಹೀಗೆ ಬಿಡಬೇಕು ಎಂದು ತಿಳಿಸಿದ್ದಾರೆ. ಸರ್ವೇ ಮ್ಯಾನ್ಯುಯಲ್‌ನಲ್ಲಿ ಪ್ರತಿಯೊಂದು ಭಾಗಕ್ಕೂ ಎಷ್ಟೋ ಕ್ಲಾಸಿಫಿಕೇಷನ್ ಇವೆ. ಇಷ್ಟೆಲ್ಲಾ ಅವರು ಮಾಡಿರುವಾಗ, ಅವರು ಮಾಡಿರತಕ್ಕದನ್ನೆಲ್ಲಾ ಸಾವಿರ ಪಂಗ್ತಿ ಬರೆದದ್ದನ್ನು ಒಂದು ವಸಿಚುಕ್ಕೆ ನುಂಗಿತು ಎನ್ನುವಹಾಗೆ ನೀವು ವಜಾಮಾಡಿದ್ದೀರಿ.

ಶ್ರೀ ಎಚ್. ಎಸ್. ರುದ್ರಪ್ಪ.—ವಜಾ ಮಾಡಿಲ್ಲ.

Sri K. KENCHAPPA.—It will be a dead letter hereafter.

ಶ್ರೀ ಎ. ವಿ. ನರಸಿಂಹರೆಡ್ಡಿ.—ಅದು ಹೇಗೆ ಸ್ವಾಮಿ ?

ಶ್ರೀ ಕೆ. ಕೆಂಚಪ್ಪ.—ಈ ಒಂದು ಸೆಕ್ಷನ್ ಅನ್ನು ರಿಪೀಲ್ ಮಾಡುತ್ತೇವೆ ಎಂದು ಹೇಳಿದ ಮೇಲೆ ಇನ್ನೇನಾಯಿತು ? 112ನೆಯ ಸೆಕ್ಷನ್ ಓದುತ್ತೇನೆ ಬೇಕಾದರೆ ನೋಡಿ.—

> "The assessment fixed by the officer in charge of survey shall not be levied without the sanction of Government. . . . . ."

By the collector according to your statute now.

53ನೆಯ ಸೆಕ್ಷನ್ ಪ್ರಕಾರ ನಿಗದಿ ಮಾಡಬೇಕಾದರೆ:—

The principles enunciated in sections 111 and 112 are to be observed. It is an enabling section.

ಆದ್ದರಿಂದ ತಾವೇ ಆಲೋಚನೆಮಾಡಿ. ಮತ್ತೆ ಅಷ್ಟೇ ನಿಲ್ಲಲಿಲ್ಲ, ಮದರಾಸಿನದೂ ಓದಿದೆ. ಅಲ್ಲೂ ಸರ್ವೇ ಡಿಪಾರ್ಟ್‌ಮೆಂಟಿನ ಸಮಾಚಾರ ಇದೆ. ಬೊಂಬಾಯಿನದೂ ಇದೆ. ಅಲ್ಲೂ ಹೀಗೆಯೇ ಇದೆ. ಬೊಂಬಾಯಿ ಲ್ಯಾಂಡ್ ರೆವೆನ್ಯು ಕೋಡ್ ಪ್ರಕಾರ.

> "The provincial Government may authorise the collector or the officer in charge of survey or such other officer as it deems fit to fix such rates. . . . ."

ಇದೇ ವಿಚಾರದಲ್ಲಿ ಹೇಳಿದೆ ಸ್ವಾಮಿ. ತಮ್ಮ ಕಡೆಯ ಕೆಲವು ಮಾನ್ಯ ಮಿತ್ರರು, ಎದುರುಪಕ್ಷದ ಮುಖಂಡರಿಗೆ ಸಧಾರಣವಾಗಿ ಬುದ್ಧಿ ಕಡಿಮೆಯಾಗಿದೆ ಎಂದು ಹೇಳಿದ್ದಾರೆ. ಸಾಧಾರಣವಾಗಿ ಬುದ್ಧಿಕಡಿಮೆ ಆದದ್ದರಿಂದಲೇ ತಮ್ಮ ಹತ್ತಿರ ಪಾಠಕಲಿಯುವುದಕ್ಕೆ ಬಂದಿದ್ದೇನೆ. ನೀವು ಇದು ಸರ್ವೇಕಾನೂನಿಗನುಗುಣವಾಗಿದೆಯೇ ಇಲ್ಲವೇ ಎಂಬುವನ್ನು ಹೇಳಿ ಸ್ವಾಮಿ ? ದಯವಿಟ್ಟು ಈ ಸೆಕ್ಷನ್‌ಗಳನ್ನೆಲ್ಲಾ ನೋಡಿ. ಇರಿಗೇಷನ್ ಆಕ್ಟು ಮ್ಯಾನ್ಯುಯಲ್ ಅದರ ಪ್ರಕಾರ ಏನೇನು ಮಾಡಿದ್ದೀರಿ ಎಂಬುದನ್ನು ತಾವು ನೋಡಬೇಕು. ಎಸ್ಟಿಮೇಟ್ ತಯಾರುಮಾಡುವಾಗ, ಒಂದು ಬೇಸಿಸ್ ಪ್ರಾರಂಭವಾಗುವುದು ಹೇಗೆಂದರೆ ಒಂದು ಪ್ರಾಜೆಕ್ಟ್ ಆದರೆ ಅದರಿಂದ ಪ್ರತಿಫಲ ಬರುತದೆಯೇ, ಇಲ್ಲವೇ ಎಂಬುದನ್ನು ನಿರ್ಧರಿಸುತ್ತಾರೆ. Whether it is a productive project or an unproductive project. ಎನ್ನುವುದನ್ನು ತಾವು ಆಲೋಚನೆಮಾಡಬೇಕು. ಕಾನೂನಾದ

ಮೇಲೆ ಸರ್ಕಾರದವರು ಬೇರೆ ರೀತಿ ತೀರ್ಮಾನಮಾಡುವವರೆಗೂ ರಿವೈಸ್ ಮಾಡುವುದಿಲ್ಲ. ಪ್ರಾರಂಭವಾದ ಮೇಲೆ ಬೆಂಗಳೂರಿನವರಿಗೂ ಜನ ಜಾತ್ರೆಗೆ ಬಂದ ಹಾಗೆ ಬರುವುದಕ್ಕೆ ಪ್ರಾರಂಭವಾಗುವುದರಿಂದ 'unless otherwise Government decides' ಎನ್ನುವ ಪ್ರಾವಿಜನ್ ಇರುವುದು ಸರಿಯೋ ಎಂಬುದನ್ನು ಪರ್ಯಾಲೋಚನೆ ಮಾಡಬೇಕಾಗಿದೆ. ಕಾಂಟ್ರಿಬ್ಯೂಷನ್ ಮೊಬಲಗು ಎಕರೆಗೆ 500 ರೂಪಾಯಿಗಿಂತ ಹೆಚ್ಚಿರಬಾರದೆಂದು ಹಾಕಿದ್ದೀರಿ. ಬೊಂಬಾಯಿನಲ್ಲಿ ಎಕರೆಗೆ 600 ರೂಪಾಯಿ ನಿಗದಿ ಮಾಡಿದ್ದಾರೆ ಮತ್ತು 20 ಇನ್‌ಸ್ಟಾಲ್‌ಮೆಂಟ್ ಕೊಟ್ಟಿದ್ದಾರೆ. ಔಟ್‌ಲೇನಲ್ಲಿ ಕಾಂಟ್ರಿಬ್ಯೂಷನ್ ಮೊಬಲಗು ಎಕರೆಗೆ 600 ರೂಪಾಯಿಗಳಂತೆ ಕಳೆದರೆ ಬಾಕಿ ಉಳಿಯುವುದಕ್ಕೆ ಶೇಕಡ 3 ಬಡ್ಡಿ ಬರಬೇಕು. ಇದಕ್ಕೆ ಏನು ಹೇಳುತ್ತಾರೋ ಏನೋ ಅಂತೂ ಸ್ವಲ್ಪ ಬರುತ್ತದೆ. ಹೆಚ್ಚಾದರೂ ಬರಬೇಕು ಕಡಮೆ ಆದರೂ ಬರಬೇಕು. ಶೇಕಡ 3 ಕ್ಕಿಂತ ಕಡಿಮೆ ಬರಬಾರದು. ತಾವು ಶೇಕಡ 12 ರಷ್ಟು ಹೆಚ್ಚು ಮಾಡುವುದಕ್ಕೆ ಹೋಗಿದ್ದೀರಿ ಶೇಕಡ 15 ಕೇಳಿದ್ದೀರಿ. ಅದು ಈ ಪುಸ್ತಕದಲ್ಲಿ ಇಲ್ಲ. ಇದು ಅಲ್ಲ, ಸುಳ್ಳು ಎಂದರೆ ಸಮರ್ಥನೆ ಮಾಡುತ್ತೇನೆ. ಒಂದು ಪ್ರಾಜೆಕ್ಟಿಗೆ ಶೇಕಡ 15 ಕೇಳಿದ್ದೀರಿ. ಇನ್ನು ಮತ್ತೊಂದು ವಿಷಯ ಹೇಳುತ್ತೇನೆ. ಇದುವರೆಗೂ ಕಾಂಟ್ರಿಬ್ಯೂಷನ್ ಮೊಬಲಗು 50 ರೂಪಾಯಿ ಇತ್ತು, ಅದನ್ನು ಕೂಡ ಯಾರು ಕೊಡುವವರು ಜಮೀನೇ ಬೇಡ ಎಂದು ಹೇಳಿ ಬಿಟ್ಟು ಬಿಟ್ಟದ್ದರಿಂದ ಅನೇಕ ಕೆರೆಗಳ ಕೆಳಗೆ ಕಾಂಟ್ರಿಬ್ಯೂಷನ್ ವಸೂಲಾಗದೆ ಹೋಗಿದೆ. ಇಂಥ ನಿದರ್ಶನಗಳು ಎಷ್ಟೋ ಇವೆ. ಅದೂ ಅಲ್ಲದೆ ಈ ಬೆಟರ್‌ಮೆಂಟ್ ಲೆವಿ ಇಂದ ಈಗ ಭದ್ರಾ ಪ್ರಾಜೆಕ್ಟಿನ ಕೆಳಗೆ ಎಷ್ಟೋ ಜನ ನೀರು ತೆಗೆದುಕೊಳ್ಳುವುದಕ್ಕೆ ಹೆದರಿಕೊಂಡು ಬಿಟ್ಟಿದ್ದಾರೆ. ನಮ್ಮಲ್ಲೂ ಎಷ್ಟೋ ಜಮೀನು ಇದೆ, ಹೊಸಕೆರೆ ಕಟ್ಟಿದ ಕೂಡಲೇ 500 ರೂಪಾಯಿ ಬೆಟರ್‌ಮೆಂಟ್ ಲೆವಿ ಹಾಕುತ್ತೀರಿ. ಚಳ್ಳಕೆರೆ, ಮೊಳಕಾಲ್ಮೂರು ತಾಲ್ಲೂಕಿನಲ್ಲಿ ಭೂದಾನ ಇಂಥಾದ್ದಕ್ಕೆ ಜಮೀನು ಕೇಳುತ್ತೀರಿ, ನಾವು ಕೊಡುತ್ತೇವೆ ತೆಗೆದುಕೊಂಡುಬಿಡಿ. ಏಕೆ ಹೇಳುತ್ತೇನೆ ಎಂದರೆ, ಈ ರೀತಿ ಇತಿಮಿತಿ ಇಲ್ಲದೆ ಕಾನೂನು ಮಾಡುತ್ತಿರುವುದರಿಂದ ಹೇಳಬೇಕಾಗಿದೆ. ಇದನ್ನು ನಮ್ಮ ಬುದ್ಧಿ ಪರೀಕ್ಷೆ ಮಾಡುವುದಕ್ಕೆ ತಂದಿದ್ದೀರೋ ಏನೋ ಎಂದು ಕೇಳುತ್ತೇನೆ. ದಯವಿಟ್ಟು ಈ ವಿಚಾರದಲ್ಲಿ ತುಂಬ ಆಲೋಚನೆ ಮಾಡತಕ್ಕದ್ದು ಸೂಕ್ತ, ತಾವು ಆಲೋಚನೆ ಮಾಡಬೇಕು.

ಇನ್ನು ಹೆಚ್ಚು ಹೇಳುವುದಿಲ್ಲ. ಇದನ್ನೆಲ್ಲಾ ಈಗಲೆ ಸರಿಪಡಿಸಿ ಒಂದು ಸರ್ವಸಮ್ಮತವಾದ ಬಿಲ್ಲನ್ನು ತನ್ನಿ. ಇಲ್ಲದೇ ಇದ್ದರೆ ಈಗ ಇದನ್ನು ಅಂಗೀಕಾರ ಮಾಡಿ ಮತ್ತೆ ಯಥಾಪ್ರಕಾರ, ಹಿಂದೆ ಒಂದು ಸಲ 1937 ರಲ್ಲಿ ದಿವಾನರವರು ಅಧ್ಯಕ್ಷರಾಗಿದ್ದು ರೂಲಿಂಗ್ ಕೊಟ್ಟಾಗ ಹೇಳಿದ್ದು, 'ರೂಲಿಂಗ್ ಕೊಡಬೇಕಾದರೂ ಸಹ ಮುಂದೆ ಎಲ್ಲಿಯವರೆಗೂ ಕೂಡ ಪ್ರಶ್ನಿಸುವಂತೆ ಇರಬಾರದು, ಆರೀತಿ ಪ್ರಶ್ನಿಸುವಂತಾಗಿ ಅದನ್ನು ವಜಾ ಮಾಡಿದರೆ ಮಾನಮರ್ಯಾದೆ ಹೋಗುತ್ತದೆ, ಜವಾಬ್ದಾರಿಯನ್ನರಿತುಕೊಂಡು ರೂಲಿಂಗ್ ಕೊಡಬೇಕು' ಎಂದು ಹೇಳಿದ್ದು. ಹೈಕೋರ್ಟ್ ಜಡ್ಜ್‌ಮೆಂಟ್ ಕೊಡಬೇಕಾದರೂ ಸಹ ಬಹಳ ಎಚ್ಚರಿಕೆಯಿಂದ ಕೊಡುತ್ತಾರೆ. ಅದನ್ನು ಮತ್ತೆ ಬದಲಾವಣೆ ಮಾಡಿದರೆ ಮಾನ ಮರ್ಯಾದೆ ಹೋಗುತ್ತದೆ ಎಂಬುದನ್ನು ತಿಳಿದುಕೊಂಡು ಜಡ್ಜು ಅವರು ತೀರ್ಮಾನ ಕೊಡುವುದು ಪದ್ಧತಿ. ಆದ್ದರಿಂದ ತಾವು ಕಾಲಕಾಲಕ್ಕೆ ಬದಲಾವಣೆ ಮಾಡುವ ಸ್ಥಿತಿಗೆ ಹೋಗಬೇಡಿ. ಈ ವಿಚಾರದಲ್ಲಿ ತಾವು ಕಳಕಳಿಯಿಂದ ಆಲೋಚನೆ ಮಾಡತಕ್ಕ ಅಂಶಗಳು ಅನೇಕವಿವೆ. ಅವನ್ನೆಲ್ಲಾ ತಾವು ಆಲೋಚನೆ ಮಾಡಬೇಕಾಗುತ್ತದೆ. 1902ನೆಯ ಇಸವಿಯಿಂದ ಬಾವಿ ತೆಗೆದಿದ್ದರೆ ಬಾಗಾಯ್ತು ಎಂದು ಕಂದಾಯ ಹಾಕಿದ್ದಕ್ಕೆ ಎಷ್ಟೋ ಗಲಾಟೆಗಳಾಗಿ, ವಿಚಾರಣೆಗಳಾಗಿವೆ. ಇತ್ತೀಚೆಗೆ ಬಾವಿಯಿಂದ ನೀರಾವರಿ ಮಾಡಿಕೊಂಡು ಸಾಗುವಳಿ ಮಾಡಿದರೆ ಬಾಗಾಯ್ತು ಎಂದು ಲ್ಯಾಂಡ್‌ರೆವಿನ್ಯು ಸರ್ವೆ ಮ್ಯಾನ್ಯುಯಲ್‌ನಲ್ಲಿ ಹಾಕಿದ್ದಾರೆ. ತೋಟ ಎಂದ ಮಾತ್ರಕ್ಕೇ ಬಾಗಾಯ್ತು ಎಂದು ಇಟ್ಟುಕೊಳ್ಳಬೇಡಿ. ಮೈಸೂರು ದೇಶದಲ್ಲಿ ಬಾಗಾಯ್ತು ಎಂದರೆ ಏನು ಎಂಬುದು ಆಲೋಚನೆ ಮಾಡತಕ್ಕ ಮಾತು. ನಾನು ಯಾರಿಗೂ ಬುದ್ಧಿ ಹೇಳುತ್ತಿಲ್ಲ. ಅನೇಕ ಜನರನ್ನು ಕೇಳಿದ್ದೇನೆ ; ಬಾಗಾಯ್ತು ಎಂದರೆ ತೋಟ ಎಂದು ಹೇಳುತ್ತಾರೆ. ಬಾವಿಗಳಿಂದ ನೀರು ತೆಗೆಯುವುದಕ್ಕೆ ಕಂದಾಯ ಹಾಕುತ್ತಾರೆ, ಮಳೆಯಿಂದ ಬೀಳುವ ನೀರು ಹರಿದುಕೊಂಡು ಹೋಗುವುದನ್ನು ತಪ್ಪಿಸಿ ಅದನ್ನು ಉಪಯೋಗಿಸಿಕೊಂಡರೆ ಅದಕ್ಕೆ ತೆರಿಗೆ ಹಾಕುತ್ತಾರೆ. ಇನ್ನೂ ಏನೇನು ತೆರಿಗೆಗಳು ಬರುತ್ತವೋ ಗೊತ್ತಿಲ್ಲ. ತೆಂಗಿನಮರಕ್ಕೆ ಎಂಟಾಣೆ, ಅಡಕೆ ಮರಕ್ಕೆ ನಾಲ್ಕಾಣೆಯಂತೆ ತೆರಿಗೆ ಹಾಕುತ್ತಾರೆಂದು ವರ್ತಮಾನವಿದೆ ; ಇದು ನಿಜವೋ ಸುಳ್ಳೋ ಗೊತ್ತಿಲ್ಲ. ಹೀಗೆ ಹಾಕಿದರೂ ಏನೂ ಆಶ್ಚರ್ಯವಿಲ್ಲ, ಅಂತೂ ಚೆನ್ನಾಗಿ ಪರ್ಯಾಲೋಚನೆ ಮಾಡಿ ತೀರ್ಮಾನಮಾಡಬೇಕು. ಇದರಲ್ಲಿರುವ ಲೋಪದೋಷಗಳನ್ನು ತಿಳಿಸಿ ನಮ್ಮ ಶಕ್ತ್ಯಾನುಸಾರ ಎಚ್ಚರಿಕೆಯನ್ನು ಕೊಟ್ಟಿದ್ದೇವೆ.

5 P.M.

Sri V. P. DEENADAYALU NAIDU (Cubbonpet).—On a point of information, Sir The Leader of the opposition had raised a point about certain rulings of the Chair given previously May I just be enlightened whether rulings of the Chair are consolidated and printed for the guidance of the House ? As is being done in other legislatures, I would like to know whether this is followed in this august House. It is not a question of printing the rulings in the regular proceedings. Proceedings are recorded verbatim and printed. The rulings of the Chair are specially binding just as decisions of the Court.

Mr. DEPUTY SPEAKER.—They are not printed separately. They are printed and incorporated in the reports and you can gather them from the reports of the Assembly proceedings.

Sri V. P. DEENADAYALU NAIDU.—I want to know whether it is not proper that should be done so. It is my suggestion to the Chair. Everywhere it is done automatically. Here is a wonderful procedure. Why not we follow it ?

Sri C. J. MUCKANNAPPA.—Sir, I rise to a point of order. My friend Sri Deenadayalu Naidu has stated that this is a wonderful procedure. Then are we wonderful creatures here ? If we are carrying on a wonderful procedure, it means we are wonderful creatures. My friend has to withdraw those words. It is a reflection on the entire House. Wonderful procedure is necessarily followed by wonderful creatures only.

Mr. DEPUTY SPEAKER.—It seemed to be wonderful to him when compared with the procedure of the other Assemblies.

ಶ್ರೀ ವೈ. ವೀರಪ್ಪ (ಹೊಳೆನರಸೀಪುರ).—ಸ್ವಾಮಿ, ಅಧ್ಯಕ್ಷರೆ, ಈ ಮಸೂದೆ ವ್ಯವಸಾಯಗಾರರ ದೃಷ್ಟಿಯಿಂದ ಅಷ್ಟು ಹಿತವಾಗಿಲ್ಲ, ಅವರಿಗೆ ಉಪಯುಕ್ತವಾಗಿಲ್ಲವೆಂದು ಹೇಳುತ್ತೇನೆ. ಈ ಮಸೂದೆಯನ್ನು ಬಹುಶಃ ಸರ್ಕಾರದವರು ತರದೇಇದ್ದಿದ್ದರೆ ಬಹಳ ಹಿತವಾಗಿತ್ತು ಎಂದು ಅಭಿಪ್ರಾಯ ಪಡುತ್ತೇನೆ. ಆದರೆ ತಂದಿದ್ದಾರೆ, ತಂದಮೇಲಾದರೂ ಇದರ ಸಾಧಕ ಬಾಧಕಗಳನ್ನು ಚೆನ್ನಾಗಿ ಯೋಚನೆ ಮಾಡಿ, ಅಥವ ಇಂಥ ಮಸೂದೆಗಳ ಮೇಲೆ ಹಿಂದೆ ತಜ್ಞರು ಯಾವ ರೀತಿ ಸೂಚನೆಗಳನ್ನು ಕೊಟ್ಟಿದ್ದಾರೆ ಅಥವ ತಜ್ಞರ ಸಮಿತಿಗಳಲ್ಲಿ ಯಾವ ಸೂಚನೆಗಳನ್ನು ಕೊಡಲಾಗಿದೆ ಎಂಬುದನ್ನೆಲ್ಲಾ ಗಮನಕ್ಕೆ ತೆಗೆದು ಕೊಂಡು ಆ ತತ್ವಗಳನ್ನೂ ಅಭಿಪ್ರಾಯಗಳನ್ನೂ ಇದರಲ್ಲಿ ಅಳವಡಿಸಬಹುದಾಗಿತ್ತು. ಹಾಗಿಲ್ಲದೆ ಏಕ್‌ದಮ್ ಯಾವುದನ್ನೂ ಪರ್ಯಾಲೋಚನೆ ಮಾಡದೆ, ಹಿಂದೆ ನಾನಾ ಪ್ರದೇಶಗಳಲ್ಲಿದ್ದಂಥ ಕಾನೂನುಗಳನ್ನು ಸಮೀಕರಣ ಮಾಡಬೇಕೆಂಬ ಒಂದೇ ದೃಷ್ಟಿಯಿಂದ ಈ ಮಸೂದೆಯನ್ನು ತೆಗೆದುಕೊಂಡು ಬಂದಿದ್ದಾರೆ. ಈ ಮಸೂದೆಯ ಎರಡನೆಯ ಪುಟದಲ್ಲಿ ಕೊಟ್ಟಿರತಕ್ಕ ಅರ್ಥವಿವರಣೆಯನ್ನು ನೋಡಿದರೆ, ಮತ್ತು ಈ ಮಸೂದೆಯ ವಿವಿಧ ಕ್ಲಾಜುಗಳಲ್ಲಿ ಉಪಯೋಗಿಸಿರುವ ಪದಗಳನ್ನು ಅರ್ಥಮಾಡಿಕೊಂಡು ನೋಡಿದರೆ, ಒಂದಕ್ಕೊಂದಕ್ಕೆ ಸಮಂಜಸವಿಲ್ಲ. 1956 ರಲ್ಲಿ ಮೈಸೂರು ಫೈನಾನ್ಸ್ ಎಂಕ್ವೈರಿ ಕಮಿಟಿ ಎಂದು ಒಂದು ಸಮಿತಿಯನ್ನು ರಚನೆ ಮಾಡಿದ್ದರು. ಆ ಸಮಿತಿಯ ವರದಿಯ ಒಂದನೆಯ ಸಂಪುಟದ 47ನೆಯ ಪುಟವನ್ನು ನೋಡಿದರೆ ಅದರಲ್ಲಿ ನೀರಾವರಿಯ ಬಗ್ಗೆ ಯಾವರೀತಿ ಮತ್ತು ಯಾವ ಸಂದರ್ಭದಲ್ಲಿ ತರಿಗೆಯನ್ನು ತೆಗೆದುಕೊಳ್ಳಬೇಕೆಂಬ ವಿಷಯದಲ್ಲಿ ಸೂಚನೆಗಳಿವೆ. "Water rate is to be paid only on supply of irrigation water supplied by Government" ಎಂದಿದೆ. ಎಂದರೆ, ಸರ್ಕಾರ ನೀರು ಸರಬರಾಯಿ ಮಾಡಿದರೆ ಮಾತ್ರ ವಾಟರ್ ರೇಟ್ ಕೊಡಬೇಕೆಂದಿದೆ. ಹೀಗಿದ್ದರೂ ಈ ಸೂಚನೆಗೆ ಸರ್ಕಾರದವರು ಗಮನಕೊಟ್ಟಿಲ್ಲ. ತಲಪರಿಗೆ ಅಥವ ನೀರು ಜಿನುಗಿಕೊಂಡು ಬಂದು ಅದಕ್ಕೆ ಸಣ್ಣ ಪುಟ್ಟ ಕಟ್ಟೆ ಹಾಕಿದರೆ ಅವುಗಳಿಂದ ಬಂದ ನೀರಿಗೂ ಇದು ಅನ್ವಯಿಸುತ್ತದೆಂದು ಈ ಮಸೂದೆಯಿಂದ ಅರ್ಥವಾಗುತ್ತದೆ. ಆದುದರಿಂದ ಇದನ್ನೆಲ್ಲಾ ಅವರು ಯೋಚನೆ ಮಾಡಬೇಕಾಗಿತ್ತು. ಈಗಿರುವ ಪದ್ಧತಿಯ ಪ್ರಕಾರ, ನಮಗೆ ತಿಳಿದಮಟ್ಟಿಗೆ, ಒಂದು consolidated system, ಎಂದರೆ, ಲ್ಯಾಂಡ್ ರೆವಿನ್ಯೂ ಮತ್ತು ವಾಟರ್ ರೇಟ್ ಎರಡೂ ಸೇರಿದೆ. ಇದನ್ನು ಸರ್ವೆ ಸೆಟ್ಲ್‌ಮೆಂಟ್ ತತ್ವದ ಮೇಲೆ ಮಾಡಿದರು. 1932ರಿಂದೀಚೆಗೆ ಸರ್ವೆ, ಆಗಿಲ್ಲ, ಯಾವುದೋ ಒಂದು ಅರ್ಥವನ್ನಿಟ್ಟುಕೊಂಡು, ಒಂದು ಆದಾಯವನ್ನು ಮಾಡಬೇಕೆಂಬ ದೃಷ್ಟಿಯಿಂದ ಈ ಮಸೂದೆಯನ್ನು ತಂದಿದ್ದಾರೆ. ಇದರಲ್ಲಿ ಪರಿಶೀಲನೆ ಮಾಡಬೇಕಾದ ಅನೇಕ ಅಂಶಗಳಿವೆ, ನೀರನ್ನು ಸರಬರಾಯಿ ಮಾಡುವುದರಲ್ಲಿ ನಾನಾ ರೀತಿಗಳಿವೆ. ಯಾವಾಗಲೂ ನೀರು ಸರಬರಾಯಿ ಮಾಡುವುದು, ಎಂದರೆ perennial supply, ಒಂದೆರಡು ತಿಂಗಳು ಮಾತ್ರ ಸರಬರಾಯಿಮಾಡುವುದು, ಮುಂತಾದ ರೀತಿಗಳಿವೆ. ಇದನ್ನೆಲ್ಲಾ ವಿಂಗಡಿಸಿ ಇದರಲ್ಲಿ ಅಳವಡಿಸಿದಿದ್ದರೆ ಚೆನ್ನಾಗಿತ್ತು. ಇದನ್ನೂ ಮಾಡಿಲ್ಲ. ಇದು ರೈತನ ತಲೆ ಒಡೆಯುವ ಬಿಲ್ಲು ಎಂದು ಈ ಸಂದರ್ಭದಲ್ಲಿ ಹೇಳಬೇಕಾಗಿದೆ. ಒಂದುಕಡೆ ವ್ಯವಸಾಯಗಾರರು ನೀರಿನ ಆಶ್ರಯವನ್ನು ಉಪಯೋಗಿಸಿಕೊಂಡು ಈರುಳ್ಳಿ, ಬೆಳ್ಳುಳ್ಳಿ ಬೆಳೆದರೂ ಅದರಮೇಲೆ ವ್ಯವಸಾಯ ತೆರಿಗೆ ಎಂದು ಹಾಕಿದ್ದಾರೆ. ಆ ಮಸೂದೆ ಅಂಗಿಕಾರವಾಗಿದೆ. ಇದೊಂದು ಹೊಸ ಮಸೂದಾಕಾನೂನೆಂದು ತಂದು ಪುನಃ ರೈತನ ಮೇಲೆ ಹೊರೆಯನ್ನು ಹೊರಿಸುವುದು ಚೆನ್ನಾಗಿಲ್ಲವೆಂದು ಹೇಳಬೇಕಾಗಿದೆ. ಯಾವಾಗಲೂ ಒಂದು ಮಸೂದೆಯನ್ನು ಕಾನೂನು ಮಾಡಬೇಕಾದರೆ ಬಹುದೂರ ಯೋಚನೆ ಮಾಡಬೇಕು. ಇದು ರೈತಾಪಿ ವರ್ಗಕ್ಕೂ ಸಾಮಾನ್ಯ ಜನರಿಗೂ ನೇರವಾಗಿ ತೊಂದರೆಯಾಗುವ ಮಸೂದೆಯಾಗಿದೆ. ಇದರಲ್ಲಿ ತೆರಿಗೆಯನ್ನು ನಿಗದಿ ಮಾಡುವ ಅಧಿಕಾರವನ್ನು ಡೆಪ್ಯುಟಿ ಕಮಿಷನರಿಗೆ ಕೊಟ್ಟಿದೆ. ಈ ಅಧಿಕಾರಿಗಳಲ್ಲಿ ಕೆಲವರು ಅನುಭವಸ್ಥರಿದ್ದಾರೆ. ಇನ್ನು ಕೆಲವರು ಅನುಭವವಿಲ್ಲದಿರುವವರೂ ಇದ್ದಾರೆ. ಅನುಭವವಿಲ್ಲದಿರುವ ಅಧಿಕಾರಿಗಳು ಹೋಗಿನೋಡಿ percolation water ಇದೆ, ಅದನ್ನು ಉಪಯೋಗಿಸುತ್ತಿದ್ದಾರೆಂದು ಹೇಳಿ ವಾಟರ್ ರೇಟ್ ಹಾಕುವ ಮನೋಭಾವವನ್ನು ತೋರಿಸಿದರೆ, ರೈತ ಯಾರಲ್ಲಿ ಹೇಳಿಕೊಳ್ಳಬೇಕು ? ಇದನ್ನೆಲ್ಲಾ ಯೋಚನೆಮಾಡಿಲ್ಲ, ಮಾಡಬೇಕಾಗಿತ್ತು. ಅಲ್ಲದೆ ಯಾವ ದರವನ್ನು ಆ ಅಧಿಕಾರಿಗಳು ನಿಗದಿಮಾಡುತ್ತಾರೋ ಎಂದು ನಮಗೆ ಸಂಶಯವಾಗಿದೆ. ಕಾನೂನಿನಲ್ಲಿ ಯಾವಾಗಲೂ ಅರ್ಥ ಸ್ವಯಂಪೂರ್ಣವಾಗಿರಬೇಕು. ಅಧಿಕಾರವನ್ನು ಕಲೆಕ್ಟರಿಗೆ ಕೊಟ್ಟರೆ ಅವರು ಸ್ವೇಚ್ಛಾನುಸಾರವಾಗಿ ತೆರಿಗೆ ಹಾಕುವುದಕ್ಕೆ ಅವಕಾಶವಿರಬಾರದು. ಅವರು ಯಾವಾಗಲೂ ಸರಿಯಾಗಿ ಮಾಡುತ್ತಾರೆಂದು ಯಾವ ಭರವಸೆಯಿದೆ ಎಂಬುದಕ್ಕೆ ಸಮಜಾಯಿಷಿ ಹೇಳಿದರೆ, ನಾನು ಒಪ್ಪಿಕೊಳ್ಳುತ್ತೇನೆ.

ಒಂದೇ ಸಮನಾದ ಕಲೆಕ್ಟರುಗಳನ್ನೇನಾದರೂ ಒಂದು ಪ್ರಯೋಗ ಶಾಲೆಯನ್ನಿಟ್ಟು ತರಪೇತು ಮಾಡಿದ್ದೀರಾ ? ಆದ್ದರಿಂದ ಕಾಣದ ರೈತನಿಗೆ ಇದರಿಂದೆಲ್ಲಾ ಬಹಳ ತೊಂದರೆಯಾಗುತ್ತದೆ. ಹಿಂದೆಯೂ ಸಹ ಅನೇಕ ಅಣೆಕಟ್ಟುಗಳನ್ನು ಮಾಡಿದ್ದೀರಿ. ವಾಣಿವಿಲಾಸ ಸಾಗರ, ಮಾರ್ಕೋನಹಳ್ಳಿ, ಕಣ್ವಾ, ಅಂಜನಾಪುರ ಇತ್ಯಾದಿ, ಅನೇಕವಿವೆ. ಅಲ್ಲಿ ಯಾವ ದರವನ್ನು ನಿಗದಿ ಮಾಡಿದ್ದೀರಿ! ಐದು ರೂಪಾಯಿ, ಹತ್ತು ರೂಪಾಯಿ, ಎರಡು ರೂಪಾಯಿ, ಆರು ರೂಪಾಯಿ ಈ ರೀತಿ ನಿಗದಿ ಮಾಡಿದ್ದೀರಿ. ಹೀಗಿರುವಾಗ ಇದನ್ನು ನೋಡಿ ರೈತನಿಗೆ ಒಂದು ತೆರನಾಗಿ ಶಂಕೆ ಅಥವಾ ಅನುಮಾನಕ್ಕಾಸ್ಪದವಿದೆ. ಎಲ್ಲಿ ಮನಸ್ಸಿಗೆ ಬಂದಂತೆ ದರವನ್ನು ಹಾಕಿಬಿಡುತ್ತಾರೋ ಎನ್ನಿಸುತ್ತಿದೆ, ಅವನಿಗೆ. ಈ ಮಸೂದೆಯಲ್ಲಿ ಯಾವ ಯಾವ ಜಮೀನಿನ ಮಣ್ಣು

ಎಷ್ಟರಮಟ್ಟಿಗೆ ಫಲದಾಯಕವಾಗಿದೆ, ಎಂಥೆಂಥ ಬೆಳೆಗಳನ್ನು ಅಲ್ಲ ಬೆಳೆಯಬಹುದಾಗಿದೆ, ಮುಂತಾದ್ದೆಲ್ಲವನ್ನೂ ನೋಡದೆ ಹೀಗೆ ತೆರಿಗೆ ಹಾಕುವುದನ್ನು ನೋಡಿದರೆ ರೈತಾಪಿ ವರ್ಗದವರಿಗೆ ಬಹಳ ಹೆದರಿಕೆಯಾಗುತ್ತದೆ. ಮತ್ತು Betterment levy, ಕಂಟ್ರಿಬ್ಯೂಷನ್ ಮುಂತಾದುವುಗಳನ್ನು ಹಾಕುವಾಗ ಕೆಲವು ಅರ್ಥ ಬರುವಂಥ ಪದಗಳನ್ನು ಇಲ್ಲಿ ಅಳವಡಿಸಿದ್ದೀರಿ. 500ರೂಪಾಯಿಗಳಿಗೆ ಹೆಚ್ಚಿಗೆ ವಿಧಿಸಕೂಡದೆಂದು ಹೇಳಿ ಅದನ್ನು 20 ವರ್ಷದ ಅವಧಿಯೊಳಗೆ ಕೊಡಬೇಕೆಂದು ಹೇಳಿದ್ದೀರಿ. ಫೈನಾನ್ಸ್ ಎಕ್ಸ್ಪರ್ಟ್ ಕಮಿಟಿಯವರು ಇದೇ ವಿಚಾರವನ್ನು ಪ್ರಸ್ತಾಪಿಸಿ 'It must be spread over a fairly long time ಎಂದು ಹೇಳಿರುವುದನ್ನು ಗಮನಿಸಬೇಕು. ಹೀಗಿರುವಾಗ ನೀವು 20 ವರ್ಷಗಳೊಳಗೆ ಎಂದು ಹೇಳಿದರೆ 20 ವರ್ಷಗಳಿಗೆ ಮುಂಚೆಯೇ, ಮೊದಲನೆಯ ವರ್ಷದಲ್ಲೇ ಕೊಡಬೇಕೆನ್ನಬಹುದು. ಈ ದೃಷ್ಟಿಯಿಂದ, ನಿರ್ದಿಷ್ಟವಾಗಿ ಹತ್ತು ವರ್ಷಗಳಲ್ಲೋ ಐದುವರ್ಷಗಳಲ್ಲೋ 20 ವರ್ಷಗಳಲ್ಲೋ ಎಂದು ಸ್ಪಷ್ಟಮಾಡಿ ಹೇಳುವುದು ಸೂಕ್ತವಾಗಿರುತ್ತಿತ್ತು. ಹಾಗಿಲ್ಲದೆ collect ಮಾಡುವವರ ಇಷ್ಟಕ್ಕೇ ಬಿಡುವುದಾದರೆ, ಅವರು ಒಂದೇ ಸಾಲಿಗೆ ಕೊಡಬೇಕೆಂದಾದರೂ ಹೇಳಬಹುದು ಅಥವಾ 20 ವರ್ಷದಲ್ಲಿ ಕೊಡಲೆಂದು ಬೇಕಾದರೂ ಹೇಳಬಹುದು ಈ ದೃಷ್ಟಿಯಿಂದ ಈ ಬಿಲ್ಲಿನಲ್ಲಿರತಕ್ಕ ಅನಿರ್ದಿಷ್ಟ ಸ್ವಭಾವದಿಂದ ರೈತಾಪಿ ಜನರಿಗೆ ತೊಂದರೆಯುಂಟಾಗುತ್ತದೆ. ಈ ಅಂಶವನ್ನು ತಾವು ಪರಿಶೀಲಿಸಬೇಕಾಗಿದೆ.

ಆಮೇಲೆ ನಾಲ್ಕನೆಯ ಸೆಕ್ಷನ್ನಿನ ನಾಲ್ಕನೆಯ ಐಟಂ ನೋಡಿದರೆ ಗಾಬರಿಯಾಗುತ್ತದೆ. "Any order passed by the prescribed authority on appeal preferred to it under sub-section (3) and subject to the orders of the aforesaid prescribed authority, the determination of the collector under sub-section 1) shall be final and shall not be liable to be questioned in any Court of Law" ಎಂದು ಅಲ್ಲಿ ಹೇಳಿದ್ದಾರೆ. ರೈತನಿಗೆ ಯಾವ ಖಾತರಿ (guarantee) ಯಿದೆ? ಕೆಳಗಿನ ಅಧಿಕಾರಿ ಅಥವಾ ಪುನರಧಿಕಾರ ಪಡೆದ ಅಧಿಕಾರಿ ಧರ್ಮರೀತಿಯಲ್ಲಿ ವರ್ತಿಸಿದ್ದಾನೆ ಎಂಬುದಕ್ಕೆ ಆತನಿಗೆ ಅಲ್ಲಿ ನ್ಯಾಯ ದೊರೆಯುವ ಇದರೆ ಮುಂದಿನ ನ್ಯಾಯಸ್ಥಾನಕ್ಕೆ ಹೋಗಿ ನ್ಯಾಯ ಪಡೆಯೋಣವೆಂಬುದಕ್ಕೆ ಅಡ್ಡಿಯಾಗಿದೆ. ಇವೆಲ್ಲಾ ರೈತಾಪಿ ವರ್ಗದವರಿಗೆ ತೊಂದರೆಗೆ ಕಾರಣಗಳಾಗಿವೆ.

ಇನ್ನು ಐದನೆಯ ಸೆಕ್ಷನ್ ಪ್ರಕಾರ Levy ಮಾಡುವುದಕ್ಕೆ ಮುಂಚೆ ನೋಟೀಸ್ ಕಳುಹಿಸಬೇಕೆಂದಿದೆ. ರೈತರು ಏನೂ ಕಾಣದವರು, ಅವಿದ್ಯಾವಂತರು ಅವರಿಗೆ ನೋಟಿಸ್ ಜಾರಿಯಾಗದಿರಬಹುದು. ಅಂಥ ಸಂದರ್ಭದಲ್ಲಿ ಮನೆಯಮೇಲೆ ಜಾರಿಮಾಡಿ, ಅತನ ಮೇಲೆ Water rate ಕೊಡಬೇಕಾದ್ದನ್ನು ಕೊಡಲಿಲ್ಲವೆಂದು ವಸೂಲಿಗೆ ಬಂದರೆ ನಿಜವಾಗಿಯೂ ಬಹಳ ತೊಂದರೆ ಯಾಗುತ್ತದೆ. ಆದ್ದರಿಂದ ರಿಜಿಸ್ಟರ್ಡ್ ನೋಟೀಸ್ ಮೂಲಕ ಕಡ್ಡಾಯವಾಗಿ ಜಾರಿ ಮಾಡಬೇಕೆಂದು ವಿಧಿಸಬೇಕಾಗಿತ್ತು. ಇದನ್ನು ತಾವಿಲ್ಲಿ ಮಾಡಿಲ್ಲ. ಊರಿನಲ್ಲಿ ವೈಷಮ್ಯ ವಿದ್ದು, ex parte ಜಾರಿಮಾಡಿ ಪಟೇಲ್ ಶ್ಯಾನುಭೋಗರುಗಳ ಕೈಯಲ್ಲ ರುಜು ಹಾಕಿಸಿಕೊಂಡು ಹೊರಟುಹೋದರೆ ರೈತನಿಗೆ ಎಷ್ಟು ತೊಂದರೆ ಯಾಗುತ್ತದೆಂಬುದನ್ನು ಯೋಚನೆ ಮಾಡಬಹುದು.

ಆ ಮೇಲೆ ಕಂಟ್ರಿಬ್ಯೂಷನ್ ಕೊಡುವುದರಲ್ಲೂ ಏನೋ ಒಂದು ತೆರನಾದ ಅರ್ಥಬರುತ್ತದೆ. ಕಂಟ್ರಿಬ್ಯೂಷನ್ ಕೊಡದೆ ಇದ್ದರೆ ಜಮೀನನ್ನು surrender ಮಾಡಬೇಕೆಂದಿದೆ. ಹಾಗೆ surrender ಮಾಡುವುದಕ್ಕೆ ಮುಂಚೆ, Betterment levy, water rate ಮುಂತಾಗಿ ಯಾವ encumbranceಗಳು ಇಲ್ಲವೆಂದು ಕಾಣಿಸಿ ಆಮೇಲೆ surrender ಮಾಡಬೇಕೆಂದಿದೆ. ಅಲ್ಲದೆ 10ನೆಯ ಸೆಕ್ಷನ್ನಿನ (3) ನೆಯ ಉಪ ಕಲಮಿನ ಪ್ರಕಾರ "The amount of Water Rate shall be recoverable as arrears of land revenue due on the land" ಎಂದು ಹೇಳಿದ್ದಾರೆ. ವಿಷಯ ಹೀಗಿರಬೇಕಾದರೆ surrender ಮಾಡಬೇಕಾದರೂ ಕಷ್ಟವಿದೆ. ಆಮೇಲೆ surrender ಮಾಡುವುದರಲ್ಲೂ ಒಂದು ಭಾಗ surrender ಮಾಡಬಹುದು, ಇನ್ನೊಂದು ಭಾಗಕ್ಕೆ ಹಣ ಕೊಡಬಹುದು ಎಂದರೆ, ಇದು ಎಷ್ಟರಮಟ್ಟಿಗೆ ಯಶಸ್ವಿಯಾಗುತ್ತದೋ, ಎಷ್ಟರಮಟ್ಟಿಗೆ ರೆವಿನ್ಯೂ ಅಧಿಕಾರಿಗಳದನ್ನು ಜಾರಿಗೆ ತರಬಲ್ಲರೋ ಎಂಬ ಶಂಕೆ ಕಂಡುಬರುತ್ತದೆ. ಆದ್ದರಿಂದ surrender ಮಾಡದೆ ಇದ್ದರೆ, ಕಂದಾಯದ ಬಾಕಿ ಕೊಡದೆ ಇದ್ದಾರೆಂದು, ಅದಕ್ಕಾಗಿ ಹರಾಜು ಹಾಕುತ್ತಾರೋ ಅಥವಾ Revenue Law ಪ್ರಕಾರ forfeit ಮಾಡಿಕೊಳ್ಳುತ್ತಾರೋ, ಗೊತ್ತಿಲ್ಲ. ಈ ಅನುಮಾನಕ್ಕೆ ಆಸ್ಪದವಿರುವ ಹಾಗೆ ಇಲ್ಲ ಅಳವಡಿಸಿರುವುದು ರೈತರಿಗೆ ಕಿರುಕುಳಕ್ಕೆ ಆಸ್ಪದವಾಗುತ್ತದೆ.

ಮತ್ತೊಂದು ವಿಚಾರ ಇಲ್ಲಿದೆ. Definitionನಲ್ಲಿ Landlord ಅಂದರೆ ಯಾರೆಂದು ಹೇಳಿದೆ. Land lord ಅನ್ನುವವನಿಗೆ ಸ್ವಂತ ಹಕ್ಕಿರಬೇಕು ಅಥವಾ ಆ ಜಮೀನಿನಲ್ಲಿ ಯಾವುದಾದರೊಂದು ರೀತಿಯ ಶ್ರದ್ಧೆ ಯಿರಬೇಕು; ಇಲ್ಲವೆ Mortgagee with possession ಆಗಿರಬೇಕು. ಇವರೆಲ್ಲರೂ 'land lord' ಎಂದು ಭಾವಿಸಲ್ಪಡುತ್ತಾರೆ. ಇವರುಗಳಲ್ಲಿ ಯಾರಾದರೂ ಒಬ್ಬರು Water Rate ಅಥವಾ Betterment levy ಕೊಡಬಹುದೆಂದು ಹೇಳಿದ್ದಾರೆ. ಹೀಗೆ ಹೇಳಿಬಿಟ್ಟು 9ನೆಯ ಸೆಕ್ಷನ್ನಿನಲ್ಲಿ 'Right of reimbursement in respect of contribution' ಎಂಬ ಭಾಗದಲ್ಲಿ, ಯಾವನಾದರೂ ಮಾಲೀಕನ ಪರವಾಗಿ ಕಂದಾಯವನ್ನು ಕೊಟ್ಟಿದ್ದರೆ ಅಥವಾ water rate, contribution ಮುಂತಾದುವುಗಳನ್ನು ಕೊಟ್ಟಿದ್ದರೆ, ಅವನು land-lord ನಿಂದ ವಸೂಲುಮಾಡಿಕೊಳ್ಳುವ ಹಕ್ಕಿದೆಯೆಂದು ಅರ್ಥ ಕೊಟ್ಟಿದ್ದಾರೆ. ಅಂದಮೇಲೆ, ಒಬ್ಬಾನೊಬ್ಬ ಭೋಗ್ಯದಾರ ಹತ್ತು ವರ್ಷ ಸ್ವಾಧೀನ ಪಡೆದುಕೊಂಡಿರುವವನಿದ್ದರೆ, ಹತ್ತು ವರ್ಷವಾದ ಮೇಲೆ ಜಮೀನ್ದಾರನು ಜಮೀನು ಬಿಡಿಸಿಕೊಳ್ಳಬೇಕೆಂದು ಬಂದಾಗ ಈ ಸೆಕ್ಷನ್ನನ್ನು ಯಾವರೀತಿ ದುರುಪಯೋಗಪಡಿಸಿಕೊಳ್ಳಬಹುದೆಂಬದನ್ನು ಯೋಚನೆ ಮಾಡಬಹುದು. ಹತ್ತು ವರ್ಷ ತಾನು water rate contribution ಕೊಟ್ಟಿರುವುದಾಗಿಯೂ ಅದಕ್ಕಿಷ್ಟು ಬಡ್ಡಿಯಾಗುತ್ತದೆ. ಅದಷ್ಟನ್ನು ಕೊಟ್ಟಹೊರತು ಭೋಗ್ಯವನ್ನು ಬಿಡುವುದಕ್ಕಾಗುವುದಿಲ್ಲವೆಂದು ಹೇಳಬಹುದು. ಅವನನ್ನೇನೂ ಮಾಡುವುದಕ್ಕಾಗುವುದಿಲ್ಲ. ಇದರಿಂದ ರೈತನಿಗೆ ಅನುಕೂಲಮಾಡಿದಂತಾಯಿತೇ ಇಲ್ಲವೇ ನೀವೇ ಯೋಚನೆ ಮಾಡಬಹುದು. ಹತ್ತು ವರ್ಷ ಸ್ವಾಧೀನ ಪಡೆದು ಬೇಕಾದನ್ನು ಬೆಳೆದುಕೊಂಡು ಆತನು ಸಂಪಾದನೆ ಮಾಡಿಕೊಂಡಿದ್ದಷ್ಟೇ ಅಲ್ಲದೆ ಪುನಃ ಇಂಥ ಒಂದು ಕಷ್ಟವನ್ನು ಕೊಡಬಹುದಾದ ರೀತಿಯಲ್ಲಿ ಕಾನೂನು ಮಾಡಿದರೆ ರೈತನಿಗೆ ಅನುಕೂಲವಾಯಿತೇ ಅಥವಾ

(ಶ್ರೀ ವೈ. ವೀರಪ್ಪ)

ಸಾಹುಕಾರನಿಗೆ ಅನುಕೂಲವಾಯಿತೇ ನೋಡಿ. ಆದ್ದರಿಂದ ಈ ಕಂದಾಯವನ್ನು ಮಾಲೀಕನೇ ಕೊಡಬೇಕೆಂದು ಕಡ್ಡಾಯ ಮಾಡಬೇಕಾಗಿತ್ತು. ಆ ಜವಾಬ್ದಾರಿಯನ್ನು ಅವನ ಮೇಲೆ ಹಾಕಿದ್ದರೆ ರೈತನಿಗೆ ತೊಂದರೆಯಾಗುತ್ತಿರಲಿಲ್ಲ. ಈಗ ಇಲ್ಲಿ ತಾವು ಕೊಟ್ಟಿರತಕ್ಕ ಅರ್ಥ ವಿವರಣೆಯಿಂದ ರೈತನಿಗೆ ಅನುಕೂಲವಾಗುವುದಿಲ್ಲವೆಂದು ಹೇಳಬೇಕಾಗಿದೆ.

ಮತ್ತೆ ಏಳನೆಯ ಸೆಕ್ಷನ್‌ಗೆ ಬಂದರೆ ಅಲ್ಲಿ ಹೀಗೆ ಹೇಳಿದೆ.—

"7. *Contribution recoverable as arrears of land revenue.*—Contribution payable under this Act in respect of any land shall be deemed to be a revenue demand due upon the said land; and the land, its products and the building (owned by the land-holder) standing upon the land, shall be deemed to be the security for the contribution. When any instalment of the contribution payable in any year is not paid on the due date, the amount of the instalment shall be deemed to be an arrear of land revenue and the provisions of the law in force regulating the recovery of land revenue, shall apply to the recovery of the said arrear together with the interest due thereon, as it applies to the recovery of the land revenue due on that land."

ಒಂದೇ ಕಾನೂನಿನಲ್ಲಿ ಮತ್ತೆ ಸೆಕ್ಷನ್ 10 (3) ರಲ್ಲಿ ಹಾಗೆಯೇ ಅದೇ ಅಂಶವಿದೆ. ಅಲ್ಲಿ ಹೀಗಿದೆ. :—

"The amount of water rate shall be recoverable in the same manner as arrears of the land revenue due on the land."

ಆರನೆಯ ಪುಟದಲ್ಲೂ ಏಳನೆಯ ಪುಟದಲ್ಲೂ ಒಂದೇ ಅರ್ಥ ಬರುವಂತೆ ನಮೂದಿಸಲಾಗಿದೆ. ಅದನ್ನು ಬಿಟ್ಟು mode of payment of contribution ಗೆ ಬಂದರೆ ಅಲ್ಲಿ ಹೀಗೆ ಹೇಳಿದೆ :—

"The land-holder of any land, in respect of which any contribution is payable, shall pay it in the manner prescribed either by surrendering to the Government a portion of his land the value whereof is equal to the amount of contribution, or in cash, or partly by surrendering land and partly in cash."

ಒಂದಕ್ಕೊಂದಕ್ಕೆ ಅರ್ಥವಾಗುವುದಿಲ್ಲ. ಲ್ಯಾಂಡ್ ರೆವಿನ್ಯೂ ಕೊಡುವಂತೆ ಕಾಂಟ್ರಿಬ್ಯೂಷನ್ ವಗೈರೆ ಕೊಡದಿದ್ದರೆ ಜಮೀನನ್ನು ಸ್ವಾಧೀನ ಪಡಿಸಿಕೊಳ್ಳುತ್ತಾರೆ. ಹರಾಜುಮಾಡಿ ಜಮೀನು ಕಂದಾಯದ ಬಾಕಿ ವಸೂಲು ಮಾಡುವಂತೆ ವಸೂಲು ಮಾಡಲು ಅವಕಾಶವಿದೆ. ಕೆಲವುಕಡೆ ಅರ್ಥವಾಗುವುದಿಲ್ಲ, ಅನಾಮಲಿ ಇದೆ. ಡ್ರಾಫ್ಟ್ ಸರಿಯಾಗಿ ಮಾಡಿಲ್ಲ. ರೆವೆನ್ಯೂ ಅಧಿಕಾರಿಗಳಿಗೆ ಈ ಸಂಬಂಧವಾದ ವಾಟರ್ ರೇಟ್ ವಗೈರೆ ವಸೂಲು ಮಾಡಲು ಅಧಿಕಾರ ಕೊಡುತ್ತಿದ್ದಾರೆ. ಇದರಿಂದ ಬಹಳ ಅನ್ಯಾಯವಾಗುತ್ತದೆ. ರೈತರ ಹಿತಕ್ಕೆ ಬಹಳಮಟ್ಟಿಗೆ ಧಕ್ಕೆ ಬರುತ್ತದೆ. ಈಗ ತಂದಿರುವ ಮಸೂದೆ ರೈತವರ್ಗದವರಿಗೆ ಸಮಂಜಸವಾಗಿಲ್ಲ ಎಂದು ಹೇಳಬೇಕಾಗಿದೆ.

ಸರ್ಕಾರದವರು ಒಂದು ಕಾನೂನು ಮಾಡಬೇಕಾದರೆ ಮೊದಲು ನಾನು ಹೇಳಿದ ಹಾಗೆ ಸರ್ವೆ ಸೆಟಲ್‌ಮೆಂಟ್ ಪ್ರಿನ್ಸಿಪಲ್ ಅನುಸರಿಸಬೇಕು. ಅದನ್ನು ಅನುಸರಿಸದೇ ಹೋದರೆ ಪುನಃ ಸರ್ವೆ ಮಾಡಿ ಯಾವಯಾವ ಜಾಗದಲ್ಲಿ ಎಂಥ ಜಮೀನಿದೆ, ಏನು ಬೆಳೆಯಾಗುತ್ತಿದೆ, ಉತ್ಪತ್ತಿಯೆಷ್ಟು ಎಂದು ಅಂಕಿ ಅಂಶಗಳನ್ನಾದರೂ ತರಿಸಿ ನೋಡಿ ಒಂದು ವ್ಯವಸ್ಥೆ ಮಾಡಬಹುದಾಗಿತ್ತು, ಸಾಮಾನ್ಯವಾಗಿ ಎಕರೆಯೊಂದಕ್ಕೆ ಎಷ್ಟು ಹಾಕಬಹುದೆಂದು ನೋಡಬಹುದಾಗಿತ್ತು. ಉದಾಹರಣೆಗೆ ಈ ದಿವಸ ಬೊಂಬಾಯಿ ಪ್ರಾಂತದಲ್ಲಿ ಉಪ್ಪುನೀರು ಜಾಸ್ತಿಯಿದ್ದು ಸಿಹಿನೀರು ಕಡಮೆ ಯಿರುವುದರಿಂದ ಉಪ್ಪುನೀರಿನ ಉಪಯೋಗ ಕಡಮೆಯಾದ್ದರಿಂದ ಅಲ್ಲಿ ವಾಟರ್ ರೇಟ್ ದರ ಜಾಸ್ತಿಯಿದೆ. ಮೈಸೂರಿನಲ್ಲಿ ವಾಣಿವಿಲಾಸ ಸಾಗರ, ಅಂಜನಾಪುರ, ಕನ್ನಂಬಾಡಿ ಕಡೆ ದರ ಕಡಮೆಯಿದೆ. ಮುಂದೆ ಒಬ್ಬ ರೆವನ್ಯೂ ಅಧಿಕಾರಿಗೆ ದರ ನಿಗದಿ ಮಾಡುವ ಅಧಿಕಾರವನ್ನು ಕೊಡುವುದರಿಂದ ನಿಜವಾಗಿಯೂ ಜನರಿಗೆ ತೊಂದರೆಯಾಗುತ್ತದೆ. ಫೈನಾನ್ಸ್ ಎಂಕ್ವೈರಿ ಕಮಿಟಿಯವರೂ ಸಹ ಒಂದು ಸೂಚನೆಯನ್ನು ಈ ವಿಚಾರದಲ್ಲಿ ಕೊಟ್ಟಿದ್ದರು; 50 ಸಾವಿರ ರೂಪಾಯಿಗಳಿಗಿಂತ ಕಡಮೆ ಖರ್ಚಿನಲ್ಲಿ ತಯಾರಾಗುವ ಪ್ರಾಜೆಕ್ಟುಗಳ ಸಂಬಂಧದಲ್ಲಿ ಬೆಟರ್‌ಮೆಂಟ್ ಲೆವಿ ಮಾಡಬಾರದೆಂದು ಹೇಳಿದ್ದರು. ನೀವು ಸ್ವಾಭಾವಿಕವಾಗಿ ಪ್ರಕೃತಿಯಿಂದ ಒದಗಿದ ಒಂದು ಸೌಲಭ್ಯಕ್ಕೂ ಕೂಡ ಈ ದಿವಸ ತೆರಿಗೆ ಹಾಕುತ್ತಿದ್ದೀರಿ. ಹೋಗಲಿ, ಅದರಿಂದ ಸಾಧಕ ಬಾಧಕಗಳೇನೆಂಬುದನ್ನಾದರೂ ಪರಿಶೀಲಿಸಿದ್ದೀರಾ? ಹತ್ತನೆಯ ಕ್ಲಾಜಿನಲ್ಲಿ ಮತ್ತೆ ಹೀಗೆ ಹೇಳಿದ್ದಾರೆ.

"Water is supplied or used for purposes of irrigation from any work belonging to, or constructed by, or on behalf of the Government: and water from any such work, by direct flow or percolation or by indirect flow, percolation or drainage from or through adjoining land irrigates any land under cultivation or flows into a reservoir and thereafter, by direct flow or percolation or by indirect flow, percolation or drainage from or through adjoining land irrigates any land under cultivation and,

in the opinion of the Collector . .''

Here again, the Collector comes in :

"........... such irrigation is beneficial to and sufficient for the requirements of crop on such land."

ಸರ್ಕಾರದವರು ಆದಾಯ ಬರುವ ಭಾಗವನ್ನು ಮಾತ್ರ ಗಣನೆಗೆ ತೆಗೆದುಕೊಂಡಿದ್ದಾರೆ. ಸರ್ಕಾರದವರು ಸಾವಿರಾರು ರೂಪಾಯಿಗಳನ್ನು ಖರ್ಚುಮಾಡಿ ಪ್ರಾಜೆಕ್ಟ್ ಮಾಡಿದರೂ ಪರ್ಕೋಲೇಷನ್ ವಾಟರ್‌ನಿಂದ ಕೆಲವು ಕಡೆ ರೈತರು ಬತ್ತ ಬೆಳೆಯುವುದಕ್ಕಾಗುವುದಿಲ್ಲ. ಸರ್ಕಾರದವರು ಮಾಡಿದ ಪ್ರಾಜೆಕ್ಟಿನಿಂದ ಕೆಲವು ಜಮೀನುಗಳಲ್ಲಿ ಯಾವ ಪೈರನ್ನೂ ಬೆಳೆಯಲು ಅವಕಾಶವಿಲ್ಲದಿದ್ದಾಗ ಏನು ಪರಿಹಾರ ಸೂಚನೆ ಮಾಡಿದ್ದೀರಿ? ಜಿನಗು ನೀರಿನಿಂದ ರೈತರು ವ್ಯವಸಾಯ ಮಾಡಿ ಬೆಳೆ ತೆಗೆಯಲು ಯಾವಾಗಲೂ ಸಾಧ್ಯವಾಗುವುದಿಲ್ಲ. ಕಾರಣ ಯಾವಾಗಲೂ ಶೀತವಿರುತ್ತದೆ. ಕೆಲವರಿಗೆ ಇದರ ಅನುಭವ ವಿರಬಹುದು. ಅಂಥ ಶೀತವಿರುವ ಜಮೀನಿನಲ್ಲಿ ನೀರುಳ್ಳಿ, ಬೆಳ್ಳುಳ್ಳಿ, ರಾಗಿ ಮೊದಲಾದ ಯಾವುದೇ ಬೆಳೆಯನ್ನೂ ಕೂಡ ತೆಗೆಯುವುದಕ್ಕಾಗುವುದಿಲ್ಲ. ಅಂಥ ಜಮೀನುಗಳಿಗೆ ಸರ್ಕಾರದವರು ಪರಿಹಾರ ನೀಡದಿದ್ದರೆ ಅನ್ಯಾಯವಾಗುತ್ತದೆ. ಸ್ವಾಭಾವಿಕವಾಗಿ ಭೂಮಿಯಮೇಲೆ ಕೆಲವು ಕಡೆ ನೀರು ಹರಿಯುತ್ತದೆ, ಮತ್ತೆ ಕೆಲವುಕಡೆ ಕಾಲುವೆ, ತಲಪರಿಗೆಗಳಿಂದ ನೀರನ್ನು ಉಪಯೋಗಿಸಿಕೊಳ್ಳಲು ಅವಕಾಶವಿರುತ್ತದೆ. ಅಂಥ ಸಂದರ್ಭಗಳಲ್ಲೂ ಕೂಡ ರೈತನಮೇಲೆ ಹೊರೆ ಹೇರಿದರೆ ಅವನಿಗೆ ಸರ್ಕಾರ ಅನ್ಯಾಯ ಮಾಡಿದ ಹಾಗಾಗುತ್ತದೆ.

ಒಟ್ಟಿನಲ್ಲಿ ಹೇಳಬೇಕಾದರೆ ಈಗ ತಂದಿರುವ ಮಸೂದೆ ಅಷ್ಟು ಚೆನ್ನಾಗಿಲ್ಲ. ಕಲೆಕ್ಟರಿಗೆ ತೆರಿಗೆ ನಿಗದಿ ಮಾಡುವ ಅಧಿಕಾರ ಕೊಡುತ್ತೀರಿ. ಅವರು ಭೂಮಿ ಯಾವ ದರ್ಜೆಯದೆಂದು ವಿಂಗಡಿಸಿ ವಾಟರ್‌ರೇಟ್ ವಗೈರೆ ಗೊತ್ತುಮಾಡುತ್ತಾರೆ. ಕೆಲವುಕಡೆ ಯಾವಾಗಲೂ ಗ್ಯಾರಂಟಿಯಾಗಿ ನೀರು ಸರಬರಾಯಾಗುತ್ತದೆ. ಮತ್ತೆ ಕೆಲವುಕಡೆ ಆ ಅವಕಾಶವಿರುವುದಿಲ್ಲ. ಬೆಳೆ ಬೆಳೆಯಲಿ, ಬೆಳೆಯದಿರಲಿ ತೆರಿಗೆ ಕೊಡಬೇಕಾಗುತ್ತದೆ. ರೈತನ ಕಷ್ಟ ಸುಖ ನೋಡದೆ ಹೀಗೆ ತೆರಿಗೆ ವಸೂಲು ಮಾಡುವುದು ಸರಿಯಲ್ಲ. ಈಗಾಗಲೆ ನಮ್ಮ ದೇಶದಲ್ಲಿ ವ್ಯವಸಾಯದ ಉತ್ಪನ್ನದಮೇಲೆ ತೆರಿಗೆ ಹಾಕಿದೆ, ಮಾರಾಟ ತೆರಿಗೆಯಿದೆ, ಜಮೀನು ಕಂದಾಯವಿದೆ. ಇಷ್ಟೆಲ್ಲಾ ತೆಗೆದುಕೊಂಡು ಮತ್ತೆ ಬಡ ರೈತ ಅಲ್ಪಸ್ವಲ್ಪ ನೀರುಳ್ಳಿ, ಬೆಳ್ಳುಳ್ಳಿ ವಗೈರೆ ಬೆಳೆದರೆ ಈ ತೆರಿಗೆ ಹಾಕುವುದರಿಂದ ರೈತರ ಹಿತಕ್ಕೆ ಧಕ್ಕೆಯಾಗುತ್ತದೆ ಈ ಮಸೂದೆ ಕಾನೂನಾದಮೇಲೆ ಅಧಿಕಾರಿಗಳು ಇದರಂತೆ ತೆರಿಗೆ ವಸೂಲು ಮಾಡುತ್ತಾರೆ. ಸುಂಕದವರ ಮುಂದೆ ಸುಖದುಃಖ ಹೇಳಿಕೊಂಡ ಹಾಗೆ ಅಧಿಕಾರವಿರುವವರ ಮುಂದೆ ಕಷ್ಟ ಸುಖ ಹೇಳಿಕೊಂಡರೂ ಅವರಿಗೆ ಕೊಡುವ ಆಜ್ಞೆ ಪ್ರಕಾರ ಕಾನೂನಿನಂತೆ ಅವರು ತೆರಿಗೆ ವಸೂಲು ಮಾಡುತ್ತಾರೆ. ಇದನೆಲ್ಲಾ ನಿಮ್ಮ ಮುಂದೆ ಹೇಳಿಕೊಳ್ಳದಿದ್ದರೆ ಸಾಧ್ಯವಿಲ್ಲ. ಕಲೆಕ್ಟರು ಬರಬೇಕಾದ ತೆರಿಗೆಯನ್ನು ಒದ್ದು ವಸೂಲು ಮಾಡುತ್ತಾರೆ. ಆ ದೃಷ್ಟಿಯಿಂದ ಒಂದು ತತ್ವದ ಆಧಾರದಮೇಲೆ ಹೇಳಬೇಕಾದರೆ ಈಗ ತಂದಿರುವ ಮಸೂದೆ ಸಮಂಜಸವಾಗಿಲ್ಲ. ಈ ಮಸೂದೆ ಇಲ್ಲಿ ಅಂಗೀಕಾರವಾಗುವುದಕ್ಕೆ ನಾಲಾಯಖ್ಖಾಗಿದೆ. ಈಗ ನಮ್ಮ ಟ್ರೆಜರಿ ಬೆಂಚಿನಲ್ಲಿ 11 ಜನ ಮಂತ್ರಿಗಳಿದ್ದಾರೆ. ಅವರು ದೂರದೃಷ್ಟಿಯಿಂದ ಈ ಮಸೂದೆಯಲ್ಲಿರುವ ಲೋಪದೋಷಗಳನ್ನು ವಿಮರ್ಶೆಮಾಡಿ ಸಾಧಕ ಬಾಧಕಗಳನ್ನು ಪರಿಶೀಲಿಸುವಂತೆ ಮಾನ್ಯ ಸದಸ್ಯರೆಲ್ಲರೂ ಒತ್ತಾಯ ಮಾಡಬೇಕು. ವಿರೋಧ ಪಕ್ಷದವರು ಹೇಳುವುದರಲ್ಲಿ ತಿರುಳಿದೆಯೋ, ಇಲ್ಲವೇ ಎಂಬುದನ್ನು ಗಮನಿಸಿ ಈ ಮಸೂದೆಯನ್ನು ಅಂಗೀಕಾರ ಮಾಡದೆ ಉದಾರ ಭಾವನೆಯಿಂದ ವಾಪಸು ಪಡೆಯುವಂತೆ ಒತ್ತಾಯ ಮಾಡುವುದು ಒಳ್ಳೆಯದು. ರೈತರ ಹಿತದೃಷ್ಟಿಯಿಂದ ಅವರ ಪ್ರತಿನಿಧಿಗಳಾಗಿ ಇಲ್ಲಿಗೆ ಬಂದು ಹೇಳುವ ನಮ್ಮ ಅಭಿಪ್ರಾಯಕ್ಕೆ ಮನ್ನಣೆಯಿತ್ತು ಸರ್ಕಾರದವರು ಈ ಮಸೂದೆಯನ್ನು ವಾಪಸು ಪಡೆಯುವುದು ಉಚಿತವಾಗಿದೆ.

ಅವರ ಕಷ್ಟ ಏನು ಎನ್ನುವುದು ನನಗೆ ಗೊತ್ತು. ನನ್ನ ಮಿತ್ರರಿಗೂ ಗೊತ್ತು. ಇವೊತ್ತಿನ ದಿವಸ ರೈತ ಹೇಗಿದ್ದಾನೆ ಎಂದರೆ, ಸುಖೀ ರಾಜ್ಯವಾಗಿರಬೇಕು ಎಂದು ಹೇಳುತ್ತಿರುವಾಗ ಸುಂಕದ ರಾಜ್ಯವಾಗಿದೆ ಎಂದು ಬಹಳ ದುಃಖದಿಂದ ಹೇಳಬೇಕಾಗಿದೆ. ಹೀಗಾಗುವುದು ಸರಿಯಲ್ಲ. ಈ ಅಂಶವನ್ನು ತಿಳಿದುಕೊಂಡು ಈ ಮಸೂದೆಯನ್ನು ವಾಪಸು ತೆಗೆದುಕೊಳ್ಳಲಿ ಎಂದು ಹೇಳುತ್ತೇನೆ. ಇದು ಅಷ್ಟು ಚೆನ್ನಾಗಿಲ್ಲ ಎಂದು ಬಹು ಸಂಕಟವಾದ ದೃಷ್ಟಿಯಿಂದ ಹೇಳಬೇಕಾಗಿದೆ. ಆದಕಾರಣ ಉದಾರವಾಗಿ ಪರಿಶೀಲನೆ ಮಾಡಬೇಕು ಎಂದು ಹೇಳಿ, ಅಧ್ಯಕ್ಷರು ಇಷ್ಟು ಅವಕಾಶವನ್ನು ಕೊಟ್ಟದ್ದಕ್ಕಾಗಿ ನನ್ನ ಕೃತಜ್ಞತೆಯನ್ನು ಅರ್ಪಿಸಿ ನನ್ನ ಭಾಷಣವನ್ನು ಮುಕ್ತಾಯ ಮಾಡುತ್ತೇನೆ.

5-30 P.M.

ಶ್ರೀ ಸಿ. ಕೆ. ರಾಜಯ್ಯಸೆಟ್ಟಿ (ಚಿಕ್ಕನಾಯಕನಹಳ್ಳಿ).—ಸ್ವಾಮಿ, ಈ ವಿಚಾರದಲ್ಲಿ ನನ್ನ ಇಬ್ಬರು ಮಿತ್ರರು ಈಗ ಸೆಲೆಕ್ಟುಕಮಿಟಿಯಿಂದ ಬಂದ ಈ ಬಿಲ್ಲಿನಲ್ಲಿರುವ ನ್ಯೂನಾತಿರೇಕಗಳನ್ನು ಈ ಸಭೆಯ ಮುಂದೆ ಇಟ್ಟಿದ್ದಾರೆ. ಆದರೆ ಅವರು ಹೇಳಿರುವುದನ್ನು ಬಿಟ್ಟು ಕೆಲವು ವಿಚಾರಗಳನ್ನು ಮಾತ್ರ ನಾನು ತಿಳಿಸಬಯಸುತ್ತೇನೆ.

ಈಗ ಬಹಳ ಪ್ರಾಮುಖ್ಯವಾದ ಈ ಲ್ಯಾಂಡು ರಿಫಾರಂಸು ಏನಿವೆಯೋ ಅವನ್ನು ಮೊದಲು ಇಲ್ಲಿ ತಂದಿದ್ದರೆ ಬಹಳ ಚೆನ್ನಾಗಿತ್ತು. ಏತಕ್ಕೆಂದರೆ ದೇಶದಲ್ಲೆಲ್ಲ ಈ ಭೂಸಮಸ್ಯೆ ಒಂದು ಮುಖ್ಯವಾದ ಸಮಸ್ಯೆಯಾಗಿದೆ. ಈ ಭೂಸುಧಾರಣೆಯ ಮೇಲೆ ಈಗ ಮೈಸೂರಿನಲ್ಲಿ ಒಂದು ದೊಡ್ಡ ಸಮ್ಮೇಳನ ಕೂಡ ಆಗುತ್ತಿದೆ. ಕೊನೆಯ ಪಕ್ಷ ಈ ಭೂಸುಧಾರಣೆಯು ಪರಿಶೀಲನೆಯಾಗಿ ನಮ್ಮ ಮುಂದೆ ಬಂದಿದ್ದರೆ ಚೆನ್ನಾಗಿರುತ್ತಿತ್ತು ಆದರೆ ಅದರಂತೆ ಮಾಡಲಿಲ್ಲ. ಇನ್ನು ಸೆಲೆಕ್ಟು ಕಮಿಟಿಯು ಕ್ಲಾಸು (5)ರಲ್ಲಿ ಹೇಗಿದೆ ಎಂದರೆ?

"It was brought to the notice of the Select Committee that in certain cases in Bombay the tenant pays land revenue and it was therefore suggested that notice in regard to contribution should also issue to him. We are, however, of the view that betterment contribution is directly related to the increase in capital value of the land and the

(ಶ್ರೀ ಸಿ. ಕೆ. ರಾಜಯ್ಯಶೆಟ್ಟಿ)

land-holder should be benefited in all cases where betterment fee is levied and thus the levy would be a legitimate demand from the land-holder. There is, therefore, no need for any provision being made for notice to a tenant. "

ನಾನು ಈ ಜತ್ತಿ ಸಮಿತಿ ರಿಪೋರ್ಟನ್ನು ಪೇಪರಿನಲ್ಲಿ ಓದಿದಾಗ ಐದು ಭಾಗದಲ್ಲಿ ಒಂದು ಭಾಗವನ್ನು ಭೂಮಾಲಿಕನಿಗೂ ಮತ್ತು ಉಳಿದ ನಾಲ್ಕು ಭಾಗವನ್ನು ಟೆನೆಂಟಿಗೆ ಎಂದರೆ ಗೇಣೀದಾರನಿಗೆ ಕೊಡಬೇಕು ಎಂದು ಒಂದು ವಿಷಯವಿತ್ತು. ಅಕಸ್ಮಾತ್ ಮುಂದೆ ನಾವು ಆರು ಭಾಗದಲ್ಲಿ ಒಂದು ಭಾಗವನ್ನು ಅಥವಾ ಏಳನೇ ಒಂದು ಭಾಗವನ್ನು ಇಟ್ಟುಕೊಳ್ಳಿ ಎಂದು ಹೇಳಿ, ಬೆಟರ್‌ಮೆಂಟು ಲೆವಿ ಒಂದು ಕಡೆ, ಇನ್ನೊಂದು ಕಡೆ ಕಂದಾಯ, ಹೀಗೆ ಕೊಡಬೇಕೆಂದರೆ ಸಾಮಾನ್ಯ ಮಧ್ಯಮ ತರಗತಿಯ ಜನಗಳಿಗೆ ಅನುಕೂಲವಾಗುವುದಿಲ್ಲ. ಸಣ್ಣ ಕೆರೆಗಳ ಬೆಟರ್‌ಮೆಂಟ್ ಲೆವಿ ಹತ್ತು ವರ್ಷಗಳೊಳಗಾಗಿ ಅಥವಾ ಐದು ವರ್ಷಗಳೊಳಗಾಗಿ ಕೂಡ ಕೊಡಬೇಕಾಗಿದೆ. ಟೆನೆನ್ಸಿ ಐದು ವರ್ಷ ಅಥವಾ ಹತ್ತು ವರ್ಷಗಳೊಳಗಾಗಿ ಇದ್ದರೆ ಡಿಕ್ಲೇರು ಮಾಡಬೇಕು ಎಂದು ಈ ಭೂಸುಧಾರಣೆಯಲ್ಲಿದೆ. ಜಮೀನು ಸಮಸ್ಯೆ ಮೊದಲು ವಿಮರ್ಶೆ ಮಾಡಿ ಆ ಮೇಲೆ ಈ ಬೆಟರ್‌ಮೆಂಟನ್ನು ಪರಿಶೀಲನೆ ಮಾಡಿ ಎಷ್ಟು ಕೊಡಬೇಕು ಎನ್ನುವುದನ್ನು ನಿರ್ಧಾರ ಮಾಡಬೇಕಾಗಿತ್ತು. ಈಗಲೇ ಈ ಕಾನೂನನ್ನು ಪಾಸು ಮಾಡದೇ ಇದ್ದರೆ ಸರಿಯಾಗಿರುತ್ತಿತ್ತು. ಈವತ್ತು ಜತ್ತಿ ಸಮಿತಿ ವರದಿಯಂತೆ ಐದನೇ ಒಂದು ಭಾಗವನ್ನು ಮಾಲೀಕನಿಗೆ ಎಂದರೆ ಅವನು ಎಷ್ಟರಮಟ್ಟಿಗೆ ಆಸಕ್ತಿ ವಹಿಸಿ ಇದನ್ನು ಎಷ್ಟರಮಟ್ಟಿಗೆ ಜಾರಿಗೆ ಕೊಡಬಹುದು ಎನ್ನುವುದನ್ನು ಯೋಚನೆ ಮಾಡಿದ ಪಕ್ಷದಲ್ಲಿ ಖಂಡಿತವಾಗಿ ಈ ಬಿಲ್ಲನ್ನು ತರುವುದು ಬಹಳ ಸೂಕ್ತವಲ್ಲದ ವಿಚಾರ. ಮತ್ತು ಈ ಸೆಲೆಕ್ಟು ಕಮಿಟಿಯ ಸದಸ್ಯರು ಯಾರಿದ್ದಾರೋ ಅವರು ಇವುಗಳನ್ನೆಲ್ಲ ಗಮನಕ್ಕೆ ತರದೇ ಹೋದುದು ತುಂಬಾ ವಿಷಾದಕರ ಎಂದು ನಾನು ಹೇಳಬೇಕಾಗಿದೆ.

ಆಮೇಲೆ ಇನ್ನೊಂದು ವಿಷಯವನ್ನು ತೆಗೆದುಕೊಳ್ಳೋಣ. ಒಂದಾನೊಂದು ಕಾಲದಲ್ಲಿ ಕೆರೆಗಳ ಮತ್ತು ಕಟ್ಟೆಗಳ ಮೇಲೆ ಒಂದು ರೀತಿಯಾದ ಹತೋಟಿಯಿತ್ತು. ಇಂದಿನ ದಿವಸ ಈ ಕೆರೆಗಳ ವಿಷಯಗಳು ಈ ಕಾನೂನಲ್ಲಿರುವುದು ಕಾಣಿಸುವುದಿಲ್ಲ. ಎಷ್ಟೋ ದೊಡ್ಡ ದೊಡ್ಡ ಕೆರೆಗಳು, ಎಂದರೆ ಲಕ್ಕವಳ್ಳಿ ಪ್ರಾಜೆಕ್ಟು, ತುಂಗಭದ್ರಾ ಪ್ರಾಜೆಕ್ಟು ಮುಂತಾದವುಗಳನ್ನು ನೋಡಿಕೊಳ್ಳಲು ಒಬ್ಬ ಎಕ್ಸಿಕ್ಯೂಟಿವ್ ಇಂಜನೀಯರು, ಅಸಿಸ್ಟೆಂಟ್ ಇಂಜನೀಯರು ಇರುತ್ತಾರೆ. ಅದೂ ಅಲ್ಲದೆ ಕೇಂದ್ರ ಸರಕಾರದವರೂ ಇವುಗಳಿಗೆ ಸಹಾಯ ಮಾಡುತ್ತಾರೆ. ಆದರೆ, ಖಂಡಿತವಾಗಿ ಇತರ ಕೆರೆಗಳ ವಿಚಾರದಲ್ಲಿ ಸರಕಾರ ಯಾವ ಆಸಕ್ತಿಯನ್ನೂ ವಹಿಸಿಲ್ಲ. ಕೆರೆಗಳನ್ನು ಕಟ್ಟಬೇಕು, ರಿಪೇರಿ ಮಾಡಬೇಕು, ಕೆರೆಗಳ ಕಾಲುವೆಗಳನ್ನು ಮಾಡಬೇಕು ಆದರೆ ಈ ರೀತಿ ಅಧಿಕಾರ ಚಲಾವಣೆ ಮಾಡಿದರೆ ಯಾವ ಉಪಯೋಗವಾಗುವದಿಲ್ಲ. ನಮ್ಮ ತಾಲ್ಲೂಕಿನಲ್ಲಿ ಒಂದು ವರ್ಷದಿಂದ ಕೆರೆಯ ನೀರು ಸಿಕ್ಕುತ್ತಿಲ್ಲ. ಈ ಕೆರೆಗೆ 80 ಎಕರೆ ಅಚ್ಚುಕಟ್ಟು. ಇದರೂ ನೀರು ಸಿಕ್ಕುವಂತೆ ಮಾಡಿಲ್ಲ. ಹೀಗೆ ಇದ್ದರೂ ಬೆಟರ್‌ಮೆಂಟ್ ಲೆವಿ ಏತಕ್ಕೆ ಹಾಕುತ್ತಾರೋ ಗೊತ್ತಿಲ್ಲ. ಸಣ್ಣ ಕೆರೆಗಳು ಇದ್ದಲ್ಲಿ ಬೆಟರ್‌ಮೆಂಟ್ ಲೆವಿಯನ್ನು ಬೊಂಬಾಯಿಯಲ್ಲಿ ವಿಧಿಸುವುದಿಲ್ಲ. ಅನೇಕ ಕೆರೆಗಳ ಅಣೆಕಟ್ಟು ರಿಪೇರಿಯಾಗದೆ ಇದೆ. ಮಣ್ಣು ಕೊಚ್ಚಿ ಹೋಗುವ ಹಾಗೆ ಆಗಿದೆ. ಈ ರೀತಿ ಇರುವವರಿಂದ ಕೋಟ್ಯಾಂತರ ರೂಪಾಯಿಗಳ ಖರ್ಚನ್ನು ಅನಂತರ ಮಾಡಬೇಕಾಗುತ್ತದೆ. ಚಿಕ್ಕನಾಯಕನಹಳ್ಳಿಯಲ್ಲಿ ನೀರುಮುಳುಗೆಂದು ಭೂಮಿಯನ್ನು ಅಕ್ವಾಯರ್‌ಮಾಡಿ ಅಪ್‌ಸೆಟ್ ಪ್ರೈಸಿಗೆ ಕೆರೆ ಅಂಗಳವನ್ನು ತೆಗೆದುಕೊಂಡು ತಮ್ಮ ಪಕ್ಷದವರೊಬ್ಬರಿಗೆ ಕೊಟ್ಟಿದ್ದಾರೆ. ಕೆರೆಯ ಹಿಂದೆ ಇರುವ ರೈತರಿಗೆ ಇದರಿಂದ ಬಹಳ ಅನಾನುಕೂಲವಾಗಿದೆ. ನಿಜವಾಗಿಯೂ ಕೆರೆಗಳ ಬಗ್ಗೆ ಸರಕಾರಕ್ಕೆ ಅಷ್ಟು ಆಸಕ್ತಿ ಇಲ್ಲ. ಜಮೀನಿನಲ್ಲಿ ಬೆಳೆ ಜಾಸ್ತಿಯಾಗುವಂತೆ ಅಭಿವೃದ್ಧಿ ಕಾರ್ಯಗಳನ್ನು ಕೈಕೊಳ್ಳುವುದು ಮಾಯವಾಗಿ ಹೋಗಿದೆ. ಈ ರೀತಿ ಯಾಕೆ ಆಗುತ್ತಿದೆ ಎಂಬುದು ನನಗೆ ತಿಳಿಯುವುದಿಲ್ಲ. ಅನೇಕ ಕೆರೆಗಳ ಫೀಡರ್ ಹಳ್ಳಗಳಲ್ಲಿ soil erosion ಆಗುತ್ತಾ ಇದೆ. ಕೆರೆಗಳಲ್ಲಿ ಸಾಕಷ್ಟು ನೀರು ಹಿಡಿಯುವದಕ್ಕೆ ಅನುಕೂಲವಿಲ್ಲ. ಇದರಿಂದ ರೈತರಿಗೆ ಬಹಳ ನಷ್ಟ ಮತ್ತು ತೊಂದರೆಯಾಗುತ್ತಿದೆ. ಕೆರೆಗಳ ಆಡಳಿತದ ವಿಚಾರದಲ್ಲಿ ನಿಗದಿ ಮಾಡಿ ಕೆರೆಗಳ ಕೆಳಗಿನ ಅಚ್ಚುಕಟ್ಟು ಉತ್ತಮ ಪಡಿಸಬೇಕು. ಸರಿಯಾಗಿ ಬೆಳೆ ಬರುವಹಾಗೆ ಭರವಸೆ ಉಂಟಾಗಬೇಕು. ಪ್ರತಿಯೊಂದು ಕೆರೆಯೂ ಯಾವ ಪರಿಸ್ಥಿತಿಯಲ್ಲಿ ಇದೆ ಎಂಬುದನ್ನು ತಿಳಿದುಕೊಳ್ಳುವುದಕ್ಕೋಸ್ಕರ ಇನ್‌ಸ್ಪೆಕ್ಟ್ ಮಾಡಿಸಿ ರಿಪೋರ್ಟು ತರಿಸಿಕೊಳ್ಳಬೇಕು. ಕೆರೆಗಳ ವಿಚಾರದಲ್ಲಿ ಬೇಜವಾಬ್ದಾರಿ ಆಡಳಿತವಾಗಿಬಿಟ್ಟಿದೆ ಎಂದು ಹೇಳಿದರೆ ಖಂಡಿತವಾಗಿ ಅದೇನೂ ಉತ್ಪ್ರೇಕ್ಷೆಯಾಗುವದಿಲ್ಲ. ಏತಕ್ಕೆಂದರೆ, ಮೊನ್ನೆ ಒಂದು ಇಂಟರ್‌ಪೆಲೇಷನ್ನಿಗೆ ಮರಾಮತ್ತು ಶಾಖಾ ಸಚಿವರು ಹೇಳಿದ ರೀತಿ, ಆ ಕೆರೆ ಸುಮಾರು 25 ವರ್ಷಗಳಿಂದ ಸಾಕಷ್ಟು ರಿಪೇರಿಯಿಲ್ಲದೇ ಶಿಥಿಲವಾಗುತ್ತಿದೆ. 25 ವರ್ಷಗಳಿಂದ ಸರ್ಕಾರೀ ಅಧಿಕಾರಿಗಳು ಆ ಕೆರೆಯನ್ನು ನೋಡಿಲ್ಲವೇ? ಸ್ವಲ್ಪ ಜವಾಬ್ದಾರಿಯನ್ನು ನಿರ್ವಹಿಸಿದ ಪಕ್ಷದಲ್ಲಿ ಎಷ್ಟೋ ಕೆರೆಗಳಿಗೆ ಸಹಸ್ರಾರು ರೂಪಾಯಿಗಳ ದಂಡ ಕೊಡಬೇಕಾಗಿದೆ. ಸರ್ಕಾರ ಈ ಕೆರೆಯ ಆಡಳಿತ ವ್ಯವಸ್ಥೆಗೆ ಏನೊಂದು ಕಾರ್ಯಕ್ರಮವನ್ನೂ ತೆಗೆದುಕೊಂಡಿಲ್ಲ. ಇವೊತ್ತು ಸುಮ್ಮನೆ ಇರ್ರಿಗೇಷನ್ ಆಕ್ಟಿನಲ್ಲಿ ಅಮಲ್ದಾರರಿಗೆ, ಅಸಿಸ್ಟೆಂಟ್ ಇಂಜನಿಯರಿಗೆ, ಹೀಗೆ ಯಾರಿಗೆ ಅಧಿಕಾರವಿದೆಯೋ ಅವರ ನೀತಿ ಕಂದಾಯವನ್ನು ವಸೂಲುಮಾಡುವುದು ವಿನಾ ಇನ್ನೇನೂ ಬೇರೆ ಇಲ್ಲ. ಇದುವರೆಗೂ ಕೆರೆ ಕಟ್ಟಿದರೆ ಕೆರೆ ಕೆಳಗಡೆ ಇರುವ ಎಲ್ಲಾ ಅಚ್ಚುಕಟ್ಟುದಾರರಿಂದ ತೆರಿಗೆಯನ್ನು ವಸೂಲುಮಾಡುತ್ತಾರೆ. ಅಚ್ಚುಕಟ್ಟಿನ ಕೊನೆಯ ಅರ್ಧಭಾಗಕ್ಕೆ ಯಾವಾಗಲೂ ನೀರಿನ ತೊಂದರೆ ಇದ್ದೇ ಇರುತ್ತದೆ. ಅದರ ಬೆಲೆ ಕಡಮೆಯಾಗುತ್ತದೆ. ಯಾವಾಗಲೂ ರೆವಿನ್ಯೂ ಆಫೀಸರ್ ಮತ್ತು ಚೀಫ್ ಇಂಜಿನಿಯರ್ ಟೈಲ್ ಎಂಡ್‌ನಲ್ಲಿರುವ ಜಮೀನಿಗೆ ಒಂದೇ ತರಹ ರೇಟನ್ನು ಫಿಕ್ಸ್ ಮಾಡುತ್ತಿದ್ದಾರೆ. ಇದ್ದರಿಂದ ರೂಲ್ಸ್ ಮಾಡುವಾಗ ಬಹಳ ಸೂಕ್ಷ್ಮ ದೃಷ್ಟಿಯಿಂದ ಪರಿಶೀಲಿಸಿ ದೊಡ್ಡ ಕೆರೆಗಳ ಟೈಲ್ ಎಂಡ್ ಭಾಗದಲ್ಲಿರುವ ಜಮೀನಿಗೆ ಮತ್ತು ಕೆರೆಗಳ ಮುಂಭಾಗದಲ್ಲಿರುವ ಜಮೀನಿಗೆ ಸ್ವಲ್ಪ ತಾರತಮ್ಯವನ್ನು, ತೆರಿಗೆಯಲ್ಲಿ ತೋರಿಸುವುದು ಬಹಳ ಉಚಿತ. ಇನ್ನು ಮೂರನೆಯ ವಿಷಯ. ಅನೇಕ ಬಿಲ್ಲುಗಳನ್ನು ಈ ಸಭೆಯ ಮುಂದೆ ಮಂಡಿಸಿದ್ದಾರೆ. ಬಿಲ್ಲುಗಳಿಗೆ ಸಂಬಂಧಪಟ್ಟ ರೂಲ್ಸ್ ಮಾಡುವುದನ್ನು ವಿಧಾನವಾಡು

ತ್ತಾರೆ. ಈ ತರಹ ಮಸೂದೆಗಳನ್ನು ತಮಗೆ ಇಷ್ಟ ಬಂದಂತೆ ರೂಲ್ಸ್ ಮಾಡಿಕೊಳ್ಳುವ ಅವಕಾಶವಾಗುವ ಹಾಗೆ ಈ ಸಭೆಯಲ್ಲಿ ತರುವುದರಿಂದ, ಜನಗಳು ಬಹಳ ತೊಂದರೆಪಡುತ್ತಿದ್ದಾರೆ. ಅನೇಕ ಮಸೂದೆಗಳು ಈ ಸಭೆಯ ಮುಂದೆ ಬಂದಿವೆ. ಅವುಗಳಿಗೆ ಇದುವರೆಗೂ ರೂಲ್ಸ್ ಆಗಿಲ್ಲವೆಂದು ಹೇಳುತ್ತೇನೆ. ಯಾವುದಾದರೂ ಒಂದು ನಿರ್ದಿಷ್ಟವಾದ ಹಾದಿಯನ್ನು ಹಾಕಿಕೊಂಡಿಲ್ಲ. ಇರ್ರಿಗೇಷನ್ ರೂಲ್ಸ್ ಆಗುವುದು ಬಹಳ ಮುಖ್ಯ. ಯಾವುದಾದರೂ ಒಂದು ಮಾಡಲ್ ರೂಲ್ಸನ್ನು ಮಾಡಿ ಸರ್ಕಾರದವರು ಈ ಮಸೂದೆಯನ್ನು ಪೂರ್ಣವಾಗಿ ಆಚರಣೆಗೆ ತಂದರೆ ಬಹಳ ಮಟ್ಟಿಗೆ ಉಪಕಾರವಾಗುತ್ತಿತ್ತು. ಈಗ ಸೆಲೆಕ್ಟ್ ಕಮಿಟಿಯವರು ತಮ್ಮ ರಿಪೋರ್ಟಿನಲ್ಲಿ ಒಂದು ಪ್ಯಾರಾ ಹೇಳಿದ್ದಾರೆ. ಇದನ್ನು ರೂಲ್ಸ್ ಮಾಡುವಾಗ ಅವರು ಪರಿಶೀಲನೆ ಮಾಡುತ್ತಾರೆಂದು ಸೆಲೆಕ್ಟ್ ಕಮಿಟಿಯವರು ಹೇಳಿದ್ದಾರೆ. ರೂಲ್ಸ್ ಮಾಡದೇ ಇದ್ದರೆ ಅವರ ಪರಿಶೀಲನೆಗೆ ಬೆಲೆಯೇ ಇಲ್ಲ. ಈಗ ಎಲ್ಲದಕ್ಕಿಂತಲೂ ಮುಖ್ಯವಾದುದು ಇದು. ಬಹಳ ಮಟ್ಟಿಗೆ ಅವಿದ್ಯಾವಂತರಾದ ರೈತರ ಮೇಲೆ ಒಂದು ಹೊಸ ತೆರಿಗೆ ಹಾಕುವುದಕ್ಕೆ ಮಾಡಿರುವ ಶಾಸನದ ರೂಲ್ಸನ್ನು, ಆದಷ್ಟು ಜಾಗ್ರತೆ ಸರ್ಕಾರದವರು ಈ ಸಭೆಯ ಮುಂದೆ ತರುತ್ತಾರೆಂದು ನಾನು ಭಾವಿಸುತ್ತೇನೆ. ಇಂದಿನ ಬಿಲ್ಲಿನಮೇಲೆ ವಿರೋಧ ಪಕ್ಷದ ನಾಯಕರು ತಿಳಿಸಿದ ಹಾಗೆ ಈ ಮಸೂದೆಯಲ್ಲಿ ಎಗ್ಸೆಂಪ್ಷನ್ ಯಾವುದಕ್ಕೂ ತೋರಿಸಿಲ್ಲ. ವಿಪರೀತ ದೊಡ್ಡ ಕೆರೆಗಳ ನೀರಾವರಿ ಯೋಜನೆ ಸಂಬಂಧದಲ್ಲಿ ಬೆಟರ್‌ಮೆಂಟ್ ಟ್ಯಾಕ್ಸ್ ಹಾಕುತ್ತಿದ್ದರು. ಹಿಂದೆ 25 ಸಾವಿರ ರೂಪಾಯಿಗಳಾಗುವ ಕೆರೆ ಕಟ್ಟೆಗೆ ಈಗ 50 ಸಾವಿರ ರೂಪಾಯಿಗಳು ಆಗುತ್ತದೆ. 50 ಸಾವಿರ ರೂಪಾಯಿಗಳ ವರೆಗೂ ಸರ್ಕಾರದವರು ಎಗ್ಸೆಂಪ್ಷನ್ ತೋರಿಸಬಹುದು. ಪಿಕ್ ಅಪ್ ಅಣೆಕಟ್ಟನ್ನು ಕಟ್ಟಿಸಿದರೆ ಅದಕ್ಕೆ ಸರ್ಕಾರದವರು ಖಂಡಿತವಾಗಿ ಈ ರೀತಿ ತೆರಿಗೆ ಹಾಕಬಾರದು. ಅನೇಕ ಕಡೆಗಳಲ್ಲಿ ಎರೋಷನ್ ಬಂಡ್ಸನ್ನು ಕಟ್ಟಿಸಬೇಕಾಗಿದೆ. ಸಬ್ ಸಾಯಿಲ್ ವಾಟರ್ ಉಪಯೋಗಿಸಲು ಅಣೆಕಟ್ಟನ್ನು ಕಟ್ಟುತ್ತಾರೆ, ಅಂಥಾದ್ದಕ್ಕೆ ಯಾವ ತರಹ ಎಗ್ಸೆಂಪ್ಷನ್ ಅನ್ನೂ ತೋರಿಸದೆಯೇ ಇರುವುದು ತುಂಬ ಆಶ್ಚರ್ಯಕರವಾದ ವಿಚಾರವಾಗಿದೆ. ಅದಕ್ಕೋಸ್ಕರವಾಗಿ ನಾನು ಸರ್ಕಾರದವರಲ್ಲಿ ಪ್ರಾರ್ಥಿಸಿಕೊಳ್ಳುವುದೇನೆಂದರೆ ದೇಶದಲ್ಲಿ ಸರ್ಕಾರ ಎಂದಿನವರೆಗೆ ಈ ಒಂದು ಭೂಸುಧಾರಣೆಯನ್ನು ಜಾರಿಗೆ ತರುವುದಿಲ್ಲವೋ ಅಂದಿನ ವರೆಗೂ ಇಂಥ ಮಸೂದೆಗಳನ್ನು ಸಸ್‌ಪೆಂಷನ್ನಲ್ಲಿಟ್ಟು ಆ ಸುಧಾರಣೆಗಳು ಬಂದನಂತರ ಬೇಕಾದರೆ ಈ ಮಸೂದೆಗಳನ್ನು ತರಬಹುದೆಂದು ಹೇಳಿ ನಾನು ನನ್ನ ಭಾಷಣವನ್ನು ಮುಗಿಸುತ್ತೇನೆ.

*ಶ್ರೀ ಬಿ. ಕೆ. ಪುಟ್ಟರಾಮಯ್ಯ (ಚನ್ನಪಟ್ಟಣ).—ಸ್ವಾಮಿ, ಈಗ ಚರ್ಚೆಯಾಗುತ್ತಿರುವ ಈ ಬಿಲ್ ದೇಶಕ್ಕೇ ಬಹಳ ಮುಖ್ಯವಾದಂಥ ಬಿಲ್ಲಾಗಿದೆ. ಇದು ಇಡೀ ದೇಶಕ್ಕೇ ಸಂಬಂಧಪಟ್ಟಂಥ ಬಿಲ್ಲಾಗಿದೆ. ಈ ಬಿಲ್ಲಿನಮೇಲೆ ಚರ್ಚೆಯಾಗುವ ಕಾಲದಲ್ಲಿ ರೆವಿನ್ಯೂ, ಪಿ.ಡಬ್ಲ್ಯು.ಡಿ. ವ್ಯವಸಾಯ ಮತ್ತು ಹಣಕಾಸಿನ ಮಂತ್ರಿಗಳೆಲ್ಲರೂ ಹಾಜರಿರಬೇಕಾದದ್ದು ಅಗತ್ಯ. ಕಾರಣವೇನೆಂದರೆ ಈ ಮಸೂದೆಯಲ್ಲಿ ಎಲ್ಲ ಮಂತ್ರಿಗಳಿಗೂ ಸಂಬಂಧಪಟ್ಟ ವಿಷಯಗಳು ಅಡಕವಾಗಿರುತ್ತವೆ. ಈಗ ಸಭೆಯಲ್ಲಿ ಕೇವಲ ವ್ಯವಸಾಯ ಮಂತ್ರಿಗಳೊಬ್ಬರು ಮಾತ್ರ ಇರುತ್ತಾರೆ. ಹಾಗೆ ಉಳಿದ ಮಂತ್ರಿಗಳಿಗೆ ಈ ಬಿಲ್ಲಿನ ಬಗ್ಗೆ ಚರ್ಚೆ ನಡೆಯುತ್ತಿರುವುದು ಅಷ್ಟು ಬೇಜಾರಾಗಿ ಕಂಡುಬಂದಿದ್ದರೆ, ಆ ರೀತಿ ಅವರು ಭಾವಿಸಿದ್ದರೆ, ನಾವೀಗ ಇದರ ಮೇಲೆ ಚರ್ಚೆ ನಡೆಸುವುದು ಅಷ್ಟು ಸಾಧುವಾಗಿ ಕಂಡುಬರುತ್ತಿಲ್ಲ. ಆದ್ದರಿಂದ ಈಗ ಸದ್ಯಕ್ಕೆ ಸಭಾ ಕಾರ್ಯಕಲಾಪಗಳ ಪಟ್ಟಿಯಿಂದ ಇದನ್ನು ಕೈಬಿಟ್ಟು, ಮುಂದೆ ಯಾವತ್ತು ಎಲ್ಲ ಮಂತ್ರಿಗಳೂ ಸಭೆಯಲ್ಲಿ ಹಾಜರಿರುತ್ತಾರೋ ಆದಿವಸ ಇದರ ಚರ್ಚೆಯನ್ನು ಮುಂದುವರಿಸಬಹುದೆಂದೂ ಅಲ್ಲಿಯತನಕ ಈ ಬಿಲ್ಲಿನಮೇಲೆ ಚರ್ಚೆಯನ್ನು ಅಡ್ಜರ್ನ್ ಮಾಡಬೇಕೆಂದೂ ನಾನು ಸಲಹೆ ಮಾಡುತ್ತೇನೆ.

Sri J. H. SHAMSUDDIN (Honawar).—Is he raising an adjournment motion? Unless the Hon'ble Member brings it in a proper motion, he cannot raise it now.

Sri B. K. PUTTARAMIYA—It is not an adjournment motion. It is just a suggestion to the Chair.

Sri A. V. NARASIMHA REDDY.—That suggestion cannot be accepted. Whether there is one Minister present here or all the eleven Ministers present here—that is not the point in question. In a Democracy it is on a joint responsibility basis that the Cabinet works. It is a simple Bill which seeks to introduce a levy on the betterment facilities that the Government is going to provide to certain lands hereafter. It is a matter which refers purely to the Public Works Department Minister. The P.W.D Minister has requested the Minister for Agriculture to be in charge of this Bill. Therefore, there is no point in saying that the Minister for P.W.D. should be present or that the Finance Minister should be present on account of financial implications or that several other matters are involved and therefore the other Ministers should be present. I do not see any reason in the suggestion of my friend Sri Puttaramiya.

ಶ್ರೀ ಬಿ. ಕೆ. ಪುಟ್ಟರಾಮಯ್ಯ.—ಸ್ವಾಮಿ, ನಾನು ಕಾನೂನು ಅನುಭವ ಎಲ್ಲರಿಗೂ ಇದ್ದೇ ಇರಬೇಕೆಂಬುದಾಗೇನೂ ಹೇಳುತ್ತಿಲ್ಲ. ಹೀಗೆ ಚರ್ಚೆ ನಡೆಯುತ್ತಿರುವಾಗ ಕೇವಲ ಒಬ್ಬರೇ ಒಬ್ಬರು ಮಂತ್ರಿಗಳಿದ್ದರೇನೂ ಪ್ರಯೋಜನವಾಗುವುದಿಲ್ಲವೆಂದು ಮಾತ್ರ ಹೇಳುತ್ತಿದ್ದೇನೆ. ಮಂತ್ರಿಗಳಿಗೆ ಜಾಯಿಂಟ್ ರೆಸ್‌ಪಾನ್ಸಿಬಿಲಿಟಿ ಇರಬಹುದು. ಇಲ್ಲಿ ಒಬ್ಬರೇ ಮಂತ್ರಿಗಳಿರುವುದೆಂದು ಲೋಪದೋಷವೆಂದೇನೂ ನಾನು ಹೇಳುತ್ತಿಲ್ಲ. ನಾನು ಸರ್ಕಾರದವರನ್ನೇನೂ ಈ ಸಂದರ್ಭದಲ್ಲಿ ಆಕ್ಷೇಪಣೆ ಮಾಡುತ್ತಿಲ್ಲ. ಆದರೆ ಈಗ ತಾನೇ ಮಾತನಾಡಿದ ಮಾನ್ಯ ಎ. ವಿ. ನರಸಿಂಹರೆಡ್ಡಿಯವರೇ ನನ್ನ ಮಾತನ್ನು ಎತ್ತಿ ಹಿಡಿಯುವಂತೆ ನನ್ನ ಅಭಿಪ್ರಾಯವನ್ನು ಪುಷ್ಟೀಕರಿಸುತ್ತಿದ್ದಾರೇನೋ ಎಂಬಂತೆ, ಸರ್ಕಾರದವರು ಈ ಮಸೂದೆಯನ್ನು ಒಂದು small bill ಎಂದು ಭಾವಿಸಿದ್ದಾರೆಂದು

(ಶ್ರೀ ಬಿ. ಕೆ. ಪುಟ್ಟರಾಮಯ್ಯ)

ಹೇಳಿದ್ದು ಸಾಕು. ಇದನ್ನು ಅವರು ಅಷ್ಟು ಹಗುರವಾಗಿ ಭಾವಿಸಿದ್ದಾರೆ. ಆ ರೀತಿ ಭಾವಿಸುವುದು ಸರಿಯಾದದ್ದಲ್ಲ; ಸಾಧುವಾದದ್ದಲ್ಲ. ಮಂತ್ರಿ ಮಂಡಳಕ್ಕೆ ಎಷ್ಟೇ ಜಾಯಿಂಟ್ ರೆಸ್‌ಪಾನ್‌ಸಿಬಿಲಿಟಿ ಇದ್ದರೂ ಒಬ್ಬರೇ ಮಂತ್ರಿಗಳು ಎಲ್ಲ ವಿಚಾರಗಳಿಗೂ ಸಮರ್ಪಕವಾಗಿ ಉತ್ತರ ಕೊಡಲು ಸಾಧ್ಯವಾಗುವುದಿಲ್ಲ. ಅದ್ದರಿಂದ ಎಲ್ಲ ಮಂತ್ರಿಗಳೂ ಇಲ್ಲಿಯೇ ಕುಳಿತು ಅನಂತರ ಇದರಬಗ್ಗೆ ಒಂದು ತೀರ್ಮಾನಕ್ಕೆ ಬರಬೇಕಾಗಿರುವಂಥ ವಿಚಾರ ಇದು. ಇದನ್ನು ಒಬ್ಬರೇ ಮಾಡುವುದಕ್ಕಾಗುವುದಿಲ್ಲ. ಕಷ್ಟವಿದೆ. ಆದ್ದರಿಂದ ಇವನ್ನೆಲ್ಲಾ ಅಧ್ಯಕ್ಷರು ಆಲೋಚನೆ ಮಾಡಬೇಕಾಗಿದೆ. ಆದ್ದರಿಂದ ಈಗ ಈ ಮಸೂದೆಯ ಮೇಲಿನ ಚರ್ಚೆಯನ್ನು adjourn ಮಾಡಬೇಕೆಂದು ದೇಶದ ಹಿತದೃಷ್ಟಿಯಿಂದ ನಾನು ತಮ್ಮಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ.

ಶ್ರೀ ಕೆ. ಪಿ. ರೇವಣಸಿದ್ದಪ್ಪ (ತಿಪಟೂರು).—ಮಂತ್ರಿಗಳು ಇಲ್ಲದೆ ಇದ್ದರೆ ಹೋಗಲಿ, ಆಡಳಿತ ಪಕ್ಷದ ಕಡೆ 150 ಜನರ ಪೈಕಿ ಹತ್ತುಪ್ಪತ್ತು ಜನ ಸಹ ಇಲ್ಲ. ಸಭೆಯಲ್ಲಿ ಸದಸ್ಯರ ಸಂಖ್ಯೆ ಬಹಳ ಕಡಮೆಯಾಗಿದೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ನನ್ನ ಸ್ನೇಹಿತರಾದ ನರಸಿಂಹರೆಡ್ಡಿಯವರು ಹೇಳಿದುದನ್ನೂ ಒಪ್ಪಿಕೊಳ್ಳುತ್ತೇನೆ, ಪುಟ್ಟರಾಮಯ್ಯನವರು ಹೇಳಿದುದನ್ನೂ ಒಪ್ಪಿಕೊಳ್ಳುತ್ತೇನೆ. ಒಂದು ಸಂಗತಿ ಏನೆಂದರೆ, ಇಂಥ ಪವಿತ್ರವಾದ, ಗುರುತರವಾದ ಮಸೂದೆಯ ಚರ್ಚೆಯಾಗುವಾಗ ನಮ್ಮ ವ್ಯವಸಾಯ ಮಂತ್ರಿಗಳು, ಮಲ್ಟಿ ಪರ್ಪಸ್ ಮಿನಿಸ್ಟರ್ ಆದದ್ದು ಬಹಳ ಸಂತೋಷ. ಶ್ರೀಮಾನ್ ನರಸಿಂಹರೆಡ್ಡಿಯವರೇನೋ ಸಿಂಪಲ್ ಬಿಲ್ ಎಂದು ಹೇಳಿದರು. ಆದರೆ, ಇದರಲ್ಲಿ ಎಷ್ಟು ಮಹತ್ವವಿದೆ ಎಂದರೆ ಇದರ ವಿಚಾರವಾಗಿ ಚೀಫ್ ಇಂಜಿನಿಯರ್ ಹತ್ತಿರ ಚರ್ಚೆಮಾಡಿ, ಸೆಕ್ರೆಟರಿಗಳ ಹತ್ತಿರ ಚರ್ಚೆಮಾಡಿ, ಈ ಬಿಲ್ಲನ್ನು ತಯಾರುಮಾಡುವಾಗ ಎಲ್ಲಿ ಏನೇನಿದೆ, ಹೇಗಿದೆ ಎಂದು ಅದರ ರೂಪ ರೇಖೆಗಳನ್ನೆಲ್ಲ ಹೊಂದಿಸಿ, ಸಂಬಂಧಪಟ್ಟ ಮಂತ್ರಿಗಳು ಈ ಬಿಲ್ಲನ್ನು ನಮ್ಮ ಮುಂದೆ ತಂದಿದ್ದಾರೆ. ಅವರಿಗೆ ಈ ವಿಷಯಗಳೆಲ್ಲ ಚೆನ್ನಾಗಿ ತಿಳಿದಿವೆ. ಸಂಬಂಧಪಟ್ಟ ಮಂತ್ರಿಗಳಿಲ್ಲದಿರುವಾಗ ಬೇರೆ ಮಂತ್ರಿಗಳು ಉತ್ತರ ಹೇಳಬೇಕು, ಸದಸ್ಯರಿಗೆ convince ಮಾಡಬೇಕು ಎಂದು ಹೊರಟಾಗ—ಮಾನ್ಯ ವ್ಯವಸಾಯ ಮಂತ್ರಿಗಳಿಗೆ ಈ ವಿಷಯ ತಿಳಿದಿಲ್ಲವೆಂದು ಹೇಳುತ್ತಿಲ್ಲ—ನಮಗೆ ಸಮಾಧಾನವಾಗುವ ರೀತಿಯಲ್ಲಿ ಹೇಳಲು ಶಕ್ಯವಾಗುವುದಿಲ್ಲ. ಹತ್ತು ಹದಿನೈದು ಲಕ್ಷ ಎಕರೆ ಜಮೀನಿನ ಮೇಲೆ ಸುಮಾರು ಎರಡು ಕೋಟಿ ರೂಪಾಯಿಗಳ betterment levy ಹಾಕುತ್ತಿದ್ದೀರಿ. ಶ್ರೀಮಾನ್ ನರಸಿಂಹರೆಡ್ಡಿಯವರು ಹೇಳುವ ರೀತಿಯಲ್ಲಿ ಇದು ಬಹಳ ಸಣ್ಣದಾಗಿ ಕಂಡರೂ ದೇಶದಲ್ಲಿ ಜನ ಇದನ್ನು ಯಾವ ರೀತಿ ನೋಡುತ್ತಾರೆಂದು ಯೋಚನೆ ಮಾಡಬೇಕು. ಇಲ್ಲಿರತಕ್ಕ ಮಂತ್ರಿಗಳೇನೋ ನಾವು ಹೇಳಿದುದನ್ನೆಲ್ಲ ಬರೆದುಕೊಳ್ಳುತ್ತಿದ್ದಾರೆ. ಆದರೆ ಈ ವಿಷಯಗಳಿಗೆಲ್ಲ ಉತ್ತರ ಕೊಡುವವರು ಮರಾಮತ್ತು ಶಾಖೆಯ ಮಂತ್ರಿಗಳು. ಇಲ್ಲಿರುವ ವ್ಯವಸಾಯ ಮಂತ್ರಿಗಳು ಉತ್ತರ ಹೇಳುವುದಿಲ್ಲ. ಆದುದರಿಂದ ಮಾನ್ಯ ಮರಾಮತ್ತು ಶಾಖೆಯ ಮಂತ್ರಿಗಳಾದ ವೀರಣ್ಣಗೌಡರು ಸಭೆಯಲ್ಲಿ ಹಾಜರಿದ್ದರೆ ಒಳ್ಳೆಯದು. ನಾನು ಮಾನ್ಯ ಅಧ್ಯಕ್ಷರನ್ನೂ ಮತ್ತು ಟ್ರೆಜರಿಬೆಂಚಿನಲ್ಲಿರುವ ಮಾನ್ಯ ಮಂತ್ರಿಗಳಲ್ಲಿಯೂ ವಿನಯದಿಂದ ಪ್ರಾರ್ಥನೆಮಾಡಿಕೊಳ್ಳುವುದೇನೆಂದರೆ, ಮರಾಮತ್ತು ಶಾಖೆಯ ಮಂತ್ರಿಗಳು ಒಬ್ಬರೇ ಇದ್ದರೂ ಚಿಂತೆ ಇಲ್ಲ. ಎಲ್ಲ ಮಂತ್ರಿಗಳೂ ಇರುವುದಕ್ಕೆ ಸಾಧ್ಯವಿಲ್ಲದಿದ್ದರೂ ಸಹ ರೆವೆನ್ಯೂ ಮಂತ್ರಿಗಳು ಮತ್ತು, the Minister who is in charge ಇದ್ದಿದ್ದರೆ ಬಹಳ ಚೆನ್ನಾಗಿತ್ತು—ಅದಕ್ಕೋಸ್ಕರ ಮಾನ್ಯ ಮರಾಮತ್ತು ಶಾಖೆಯ ಮಂತ್ರಿಗಳು ಬಂದಾಗ ಇದನ್ನು ತೆಗೆದುಕೊಳ್ಳಬಹುದೆಂದು ಹೇಳುತ್ತೇನೆ.

[MR. SPEAKER in the Chair.]

Sir, it is not an adjournment motion. There is no point of order; there is no point of information, there is no point of clarification. There is absolutely nothing of that sort. It is only a humble request to the Treasury Benches as well as to the Speaker to see that this Bill is taken up when the concerned Minister is present in the House.

Sri A. V. NARASIMHA REDDY.—I have already said that this is a simple Bill. My Hon'ble friend seems to be confused and he is applying all kinds of translation to that particular word. ನಾನು ಸಣ್ಣದು, ದೊಡ್ಡದು ಎಂದಲ್ಲ ಹೇಳಿದ್ದು. ದೊಡ್ಡದು, ಸಣ್ಣದು ಎಂದು ಹೇಳಿ, ನರಸಿಂಹರೆಡ್ಡಿಯವರು ಲಘುವಾಗಿ ಇದನ್ನು ನೋಡಬೇಕಾಗಿಲ್ಲವೆನ್ನುವ ರೀತಿಯಲ್ಲಿ ನಮ್ಮ ಸ್ನೇಹಿತರು ಮಾತನಾಡುತ್ತಿದ್ದಾರೆ. ನನ್ನ ಉದ್ದೇಶ ಅದಲ್ಲ. ನೀರಾವರಿ ಕಾಮಗಾರಿಗಳನ್ನು ಕಲ್ಪಿಸಿಕೊಡುವಾಗ betterment levy ಎಂದು ನೀರು ಒದಗಿಸುವುದಕ್ಕೆ ಒಂದು ತೆರಿಗೆಯನ್ನು ತೆಗೆದುಕೊಳ್ಳಬೇಕು ಎಂಬುದು ಸಾಮಾನ್ಯವಾದ ಮಸೂದೆ ಎಂದು ಹೇಳಿದೆನೇ ಹೊರತು, ಸಣ್ಣದು, ದೊಡ್ಡದು ಎಂದು ಹೇಳಲಿಲ್ಲ. ದಯಮಾಡಿ ಆ ರೀತಿಯಾಗಿ ತಿಳಿದುಕೊಳ್ಳಬಾರದೆಂದು ಹೇಳುತ್ತೇನೆ.

ಶ್ರೀ ಬಿ. ಕೆ. ಪುಟ್ಟರಾಮಯ್ಯ.—It is a simple Bill ಎಂದರೆ ಲಘುವಾದುದು ಎಂದರ್ಥವಾಗುತ್ತದೆ. ಇದು ಭಾರಿಯಾದದ್ದಲ್ಲ. ಇದರಮೇಲೆ ಹೆಚ್ಚು ಮಾತನಾಡಬೇಕಾಗಿಲ್ಲ ಎಂದಂತಾಗುತ್ತದೆ. ಇವರು ಹೇಳುವುದರಲ್ಲಿಯೇ ದೇಶದ ಹಿತದೃಷ್ಟಿ ಎನ್ನುವುದು ಇವರ ಮನಸ್ಸಿನಲ್ಲಿ ಎಷ್ಟರ ಮಟ್ಟಿಗಿದೆ, ದೇಶದ ಕಡೆ ಇವರ ಗಮನವಿದೆಯೇ ಎಂದು ಊಹಿಸಬಹುದು. ದೇಶದ ಜನತೆಗೆ ಬಹಳ ಕೆಟ್ಟ ಪರಿಣಾಮವಾಗತಕ್ಕ ಮಸೂದೆ. ಇಡೀ ಸಂಸ್ಥಾನದಮೇಲೆ, ದೇಶದಮೇಲೆ ಏನಾದರೂ...............

ಅಧ್ಯಕ್ಷರು.—ಒಂದು ಸಲಹೆ. ದೇಶಕ್ಕೆ ಸಂಬಂಧಿಸಿದ್ದಲ್ಲ, ಈ ಮಸೂದೆ; ನಮ್ಮ ರಾಜ್ಯಕ್ಕೆ ಮಾತ್ರ ಸಂಬಂಧಿಸಿದ್ದು. ದೇಶವೆಂದರೆ ಇಂಡಿಯಾ ದೇಶ ಎಂದಾಗುತ್ತದೆ.

ಶ್ರೀ ಬಿ. ಕೆ. ಪುಟ್ಟರಾಮಯ್ಯ.—ಅಧ್ಯಕ್ಷರು ಹೇಳಿದುದನ್ನು ಒಪ್ಪಿಕೊಳ್ಳುತ್ತೇನೆ, ಇನ್ನು ಮುಂದೆ ರಾಜ್ಯ, ಮೈಸೂರು ರಾಜ್ಯ ಎಂದೇ ಹೇಳುತ್ತೇನೆ. ಈ ರಾಜ್ಯಕ್ಕೆ ಸಂಬಂಧಪಟ್ಟಂತೆ, ನಮ್ಮ ರೈತಾಪಿ ಜನರ ಹಿತದೃಷ್ಟಿಯಿಂದ ಇದನ್ನು ಮಾಡಿದ್ದರೆ ಅವರ ಸ್ಥಿತಿಗತಿಗಳ ಸುಧಾರಣೆ ಬಗ್ಗೆ ಏನಾದರೂ ಮಾಡಿದ್ದರೆ, ಇದಕ್ಕೆ ಸಂಬಂಧಪಟ್ಟ ಮಂತ್ರಿಗಳು—ಹನ್ನೊಂದು ಜನ

ಮಂತ್ರಿಗಳೂ ಇರಬೇಕೆಂದು ನಾನು ಹೇಳುವುದಿಲ್ಲ—ಇರಬೇಕು. ಎಕ್ಸೈಸ್‌ಬಾಬಿಗೆ ಸಂಬಂಧಪಟ್ಟ ಮಂತ್ರಿಗಳಿಗೂ ಇದಕ್ಕೂ ಸಂಬಂಧವಿಲ್ಲ. ಅವರು ಇಲ್ಲದಿದ್ದರೂ ಈ ಮಸೂದೆಯ ಮೇಲೆ ಚರ್ಚೆಮಾಡುವುದಕ್ಕೆ ತೊಂದರೆ ಇಲ್ಲ. ಹೀಗೆ ಹಣಕಾಸಿನ ಮಂತ್ರಿಗಳು ರೆವಿನ್ಯೂ ಮಂತ್ರಿಗಳ ಮಸೂದೆಯನ್ನೂ ಆ ಮೇಲೆ P.W.D. ಮಂತ್ರಿಗಳ ಈ ಮಸೂದೆಯನ್ನು ಇನ್ನೊಬ್ಬ ಮಂತ್ರಿಗಳು ನಮ್ಮ ಮುಂದೆ ಮಂಡಿಸಿದರೆ ಹೇಗಾಗುತ್ತದೆ? ಎಲ್ಲವನ್ನು ಲೆಖ್ಖಹಾಕಿಕೊಂಡು ಈ ಬಿಲ್ಲನ್ನು ತಂದಿರುತ್ತಾರೆ. ಈಗ ಆ ಮಂತ್ರಿಗಳು ಇಲ್ಲ. ಸರ್ಕಾರ ಇಲ್ಲ ಎಂದು ನಾನು ಹೇಳುತ್ತಾ ಇಲ್ಲ. ಅವರು ಆ ವಿಷಯದಲ್ಲಿ ಪರಿಶ್ರಮ ತೆಗೆದುಕೊಂಡು ತಂದಿರುತ್ತಾರೆ. ನಾವು ಎಲ್ಲಾ ಆಸ್ಪೆಕ್ಟ್ಸ್ ಓದಿಕೊಂಡು ಬರುತ್ತೇವೆ. ಬೇರೆ ಆಸ್ಪೆಕ್ಟ್ಸ್ ಮೇಲೆ ಮಾತನಾಡಿ ನಾವು ಸಲಹೆಗಳು ಕೊಟ್ಟಾಗ ಮಂತ್ರಿಗಳು ಕನ್ವಿನ್ಸ್ ಆದರೆ ನಮಗೆ ಅನುಕೂಲವಾಗುತ್ತದೆ. ಅವರು ಇರುವಾಗ ಸರಿಯಾಗಿ ಇದು ಚರ್ಚೆ ಆಗುವುದು ಉತ್ತಮ. ಇಂಥ ಮಹತ್ವದ ಬಿಲ್ಲನ್ನು ಸಂಬಂಧಪಟ್ಟ ಮಂತ್ರಿಗಳು ಬರುವವರೆವಿಗೂ ಇಟ್ಟದ್ದು ಮುಂದೆ ಡಿಸ್‌ಕಸ್ ಮಾಡುವುದು ಸೂಕ್ತ ಎಂದು ನಾನು ಅಧ್ಯಕ್ಷರಿಗೂ ಮತ್ತು ಮಾನ್ಯ ಮಂತ್ರಿಗಳಿಗೂ ಸಲಹೆ ಮಾಡುತ್ತೇನೆ. ಅವರೂ ಕೂಡ ನಾನು ಹೇಳಿದ್ದಕ್ಕೆ ಬೆಂಬಲ ಕೊಟ್ಟು ರಾಜ್ಯದ ಹಿತವನ್ನು ಕಾಪಾಡುತ್ತಾರೆಂದು ಹೇಳಿ ನಾನು ಅಧ್ಯಕ್ಷರಲ್ಲಿ ಮನವಿಮಾಡಿಕೊಳ್ಳುತ್ತೇನೆ.

Sri H. S. RUDRAPPA (Minister for Agriculture).—Sir, with your permission I want to bring to the notice of the Hon'ble Member that before being introduced in this House this Bill was considered at length and in detail by the Cabinet and so this is a matter of joint responsibility for the Cabinet. This Bill was discussed in this House after it was introduced here and then it was sent to the Select Committee. The Select Committee examined the Bill in detail and it has submitted its report. I wish the particular Minister concerned had been present here, but he is unavoidably absent and, therefore, I am in charge of it. During this stage of the discussion of the Bill I do not think the presence of the other Ministers would in any way improve the matter. When the Bill is taken up clause by clause, perhaps the presence of the Minister concerned may be necessary. Therefore, at this stage tne Bill can be discussed even without the presence of the Minister concerned. That is my submission.

ಶ್ರೀ ಬಿ. ಕೆ. ಪುಟ್ಟರಾಮಯ್ಯ.—ಸ್ವಾಮಿ, ಒಂದು ಮನವಿ.

ಅಧ್ಯಕ್ಷರು.—ರೂಲ್ ಹೀಗಿದೆ. ಏನಾದರೂ ಒಂದು ಸಬ್‌ಮಿಷನ್ ಮಾಡಬೇಕೆಂದರೆ, ಒಂದು ಸಲ ಮನವಿ ಮಾಡಬಹುದು. ನಾಲ್ಕೈದು ಸಲ ನಿಂತರೆ ಹೇಗೆ? ಈಗ ಮಂತ್ರಿಗಳು ಹೇಳಿದಮೇಲೆ ನೀವು ಹೇಳಬೇಕು. ಅವರು ನಿಂತಿರುವಾಗ ನೀವು ನಿಲ್ಲುವುದಕ್ಕೆ ಆಗುವುದಿಲ್ಲ. ತಾವು ಏನು ಹೇಳಬೇಕೋ ಅದನ್ನು ಹೇಳಿದ್ದೀರಿ. ಅವರು ಉತ್ತರ ಕೊಡುತ್ತಾರೆ. ಆಮೇಲೆ ನೀವು ಪ್ರಶ್ನೆ ಕೇಳಬಹುದು; ಉತ್ತರ ಕೊಡುತ್ತಾರೆ. ಅದಿಲ್ಲದೆ ತಾವು ಈ ರೀತಿ ಗಡಿಬಿಡಿ ಮಾಡಿದಹಾಗೆ ಮಾಡಬಾರದು.

ಶ್ರೀ ಬಿ. ಕೆ. ಪುಟ್ಟರಾಮಯ್ಯ.—ಒಂದು ಸಿಂಗಲ್ ಸೆಂಟೆನ್ಸ್ ಹೇಳುವುದಕ್ಕೆ ಅವಕಾಶ ಕೊಡಿ.

ಅಧ್ಯಕ್ಷರು.—ಒಂದು ಸಿಂಗಲ್ ಸೆಂಟೆನ್ಸಿಗೂಕೂಡ ಅವಕಾಶ ಕೊಡುವುದಿಲ್ಲ.

ಶ್ರೀ ಬಿ. ಕೆ. ಪುಟ್ಟರಾಮಯ್ಯ.—ಹೊಸ ವಿಷಯ ಹೇಳಬೇಕಾಗಿದೆ.

ಅಧ್ಯಕ್ಷರು.—ಯಾವ ವಿಷಯವೂ ಬೇಡ. This will set a bad example. ಪುನಃ ಪುನಃ ಹೇಳಬೇಕಾಗಿರುತ್ತದೆ. ನೀವು ಹೇಳಿದಹಾಗೆ ಚರ್ಚೆಗೆ ಪರವಾನೆಗೆ ಕೊಡುವುದಕ್ಕಾಗುವುದಿಲ್ಲ. ಬೇಕಾದಷ್ಟು ನಿಮಗೆ ಮಾತನಾಡುವುದಕ್ಕೆ ಅವಕಾಶ ಕೊಡಬೇಕೆಂದಿದ್ದೆ. ಪ್ರತಿಯೊಂದು ಸಲ ಈ ರೀತಿ ಮಾಡಿದರೆ ಚೆನ್ನಾಗಿರುವುದಿಲ್ಲ. ಅದು ಏನೆಂದರೆ ನಿಂತು ಮಾತನಾಡುವುದನ್ನು ಬಿಟ್ಟು ಕುಳಿತು ಮಾತನಾಡುತ್ತಿದ್ದೀರಿ! ಆದ್ದರಿಂದ ಶ್ರೀ ಪುಟ್ಟರಾಮಯ್ಯನವರು ಮಾತನಾಡುವುದನ್ನು ಕಡಮೆ ಮಾಡಿದರೆ ಆಕಾಶ ಕಳಚಿಬೀಳುವುದಿಲ್ಲ. ಎರಡನೆಯವರು ಮಾತನಾಡಬೇಕಾಗಿದೆ. ಆದ್ದರಿಂದ ಅವರಿಗೆ ಅವಕಾಶ ಕೊಡುತ್ತೇನೆ.

6. P.M.

Sri G. ANNA RAO (Afzalpur).—Mr. Speaker, Sir, I rise to support this Bill and the Select Committee Report thereon. The Opposition Members who have spoken so far have taken many objections not only to the principle of the Bill but also to the various provisions contained in the Bill and the recommendations of the Select Committee. I feel, Sir, that the objections are not based on sound footing. The contribution and the water rate suggested not only in the Bill but in the Select Committee Report are reasonable; not only they are reasonable, but they are in the interest of the farmers themselves. In these days of forging ahead with developmental works and when there is food scarcity in the country and when we require more finances, to oppose this Bill is not called for. The Leader of the Opposition has hurled many objections on the principle of the Bill itself. As this House is aware, not only the Government of India but the various State Governments are investing more amounts for providing irriga-

(SRI G. ANNA RAO)

tion facilities to the raiyats. It is clear that these works are not being executed from out of the general revenues of the States, but from borrowed moneys. Therefore, it becomes the duty of the Government to recover the capital expenses to repay the loans.

Therefore, to say that the Government is taxing the people or that the Government is burdening the people with taxes and contributions, is, to say the least, uncalled for. The Government, when it constructs irrigation works, has a right to except from the beneficiaries who take advantage of the capital works a return proportionate to the benefits accruing to the beneficiaries. As we all know, the State has floated loans and is continuously obtaining loans in order to develop in the various spheres. Irrigation and power projects are being given great prominence. Under the circumstances, to say that the object of the Government is only to tax and burden the people and to charge that the Government is acting against the interests of the people is unfounded. It is very essential that the Government should recover by taxing and collecting betterment contribution and also by levying water rate, on all the works which stand to benefit the farmer.

Sir, there are many salutory suggestions in the Bill. Government has been empowered or delegated with many powers of rule-making and in these days when legislation is prolific, the rule-making powers vest in the Government. At the same time, in this Bill, in many places the power to make rules has been delegated to the Government, subject to the condition of its publication beforehand, so that not only the people in the country, but also the legislators would know in advance the kind of rules that have been made, whether they are in the interests of the people and the agriculturists and whether they impose an undue burden on the people. This proviso is salutory and I welcome it.

I would like te make a suggestion with regard to clause 5. The Select Committee's report says:

> "......betterment contribution is directly related to the increase in capital value of the land and the land-holder would be benefited in all cases where betterment fee is levied and thus the levy would be a legitimate demand from the land-holder. There is, therefore, no need for any provision being made for notice to a tenant".

Here a distinction has been made between a tenant and a land-holder. According to section 2 (*b*) the land-holder has been defined as:

> "'land-holder' or 'holder' signifies the person in whom a right to hold land is vested, whether solely on his own account, wholly or partly in trust for another person..."

There is a proviso to this clause. In this proviso, only South Kanara District is covered: "...or a mulgeni tenant in the South Kanara District...". This definition, I submit, is not all-pervasive It does not cover other tenants from Hyderabad-Karnatak and Bombay-Karnatak area. In the Tenancy Act of Hyderabad, the tenant and the land-holder (the occupant of the land having been defined separately) or the land held by the protected tenant gets 60% of the rights vested in him, 40% vesting in the occupant or Pattedar. Therefore to issue notice to the Pattedar, who owns only the right of 40%, is, to say the least, unjustified. Therefore a definition has to be inserted in this Bill, so that both of them, the Pattedar and the tenant, should share in paying the irrigation and betterment levy. Unless this distinction is made I think the land-holder will be taken as the Pattedar or the occupant of the land. Unless this defect is remedied notice will be served on the Pattedar who has got only 40 per cent of the right in the holding. I do not know what provisions there are in the other Tenancy Acts. But as far as Hyderabad is concerned, I can say without fear of

contradiction that a protected tenant has got 60 per cent right and a Pattedar only 40 per cent. To mention the tenants of South Kanara and not to mention other tenants about whom nothing has been said here, I think, is not good. While implementing the Act many difficulties will crop up and the Government will be faced with them. So "land-holder" should be sufficiently defined and a proviso should be added to the definition (f).

About restoration work, during the first reading stage of the Bill I urged before this House that restoration work should not be subjected to levy of betterment contribution. What is after all restoration work? If a tank falls into disrepair, in order to restore it to its former capacity the Government has to undertake restoration work. Suppose by restoration work additional land is brought under irrigation; then it will be perfectly all right for the Government to levy this tax. But there is no mention about it. Simply carrying on restoration work and then subjecting the raiyat to betterment levy is, I think, not fair. In the Mysore Finance Enquiry Committee Report it has been suggested that where restoration work did not add any acreage or when a tank was merely restored to its former capacity, no betterment tax should be levied. Therefore, to say that restoration work also is subject to betterment levy is not correct.

As far as Hyderabad area is concerned, the date of levy has been stated as 1st August 1947. If this date is taken into consideration, then all the works which started about that date will be subject to betterment levy. Unless some benefit accrues to the land-holder in that area, I do not consider that date as the date of levy because in other clauses it has been provided that the occupant or the landholder should derive some benefit or other from the land. Hence if this date is taken as the relevant date, to levy betterment tax from that date would be unjustified. Therefore this requires some amendment because in Hyderabad the major work which was done was only in the case of Thungabhadra project. In that project I feel that the water was let out through the canals in 1952-53 to an extent of 40 miles. There are other areas which are going to be irrigated only after the canal system is completed. Therefore if this date is taken as the date of levy, some injustice will be done to the land-holders or atchkatdars.

Sri H. S. RUDRAPPA.—Is it the opinion of the Hon'ble Member that after letting water water rate should be levied?

Sri ANNA RAO GANAMUKHI.—Yes. If in spite of the water being let out, a land-holder does not take benefit out of it, of course Government can collect the tax from him. On what basis 1947 is put, I do not know. Water was let out on 4th August 1947. But it was only in 1952-53 that the land-holders began to take advantage of this water and that also on a restricted scale. This date therefore has to be revised.

The charge of the Opposition Leader is that this is not a charge but a tax. He has made a distinction between a charge and a tax. But he is not justified in his statement because taxes are collected without any return for the same. General sales-tax and other taxes are collected. But there the State gives benefit to the general public. Here it is termed as charge because Government gives a service. They construct something or they maintain something. Thus it will be a charge on that property, on that particular property where this service is obtainable. Therefore to say that this charge is unjust is not proper. Wherever Government gives service of whatever nature, there the tax is charged on that property and not on any other property. Where a tax is not paid, then it will be a burden on all the property of the assessee. Therefore this charge which is levied on a particular property can be recovered by Government from that particular property. Therefore there is no strength in the argument advanced. It is in the fitness of things that in these days of development taking place in our country, in these days when everybody is interested in growing more food so as to feed our people, we are more

(SRI ANNA RAO GANAMUKHI)

justified to tax the people, to obtain loan from various sources and build up our capital assets and finances. Ultimately this has to be recovered from the people for repayment of loans.

Sri C. J. MUCKANNAPPA.—Sir, the House is very thin and I request the Chair to reconsider......

Mr. SPEAKER.—But there is quorum. I have no objection to rise provided the lost time is not asked for.

Sri C. J. MUCKANNAPPA.—We leave that matter to the discretion of the Chair.

Mr. SPEAKER.—If it is left to the discretion of the Speaker, I will think over it. But what I mean to say is this. In case I decide that whatever time is lost is lost for ever, the Hon'ble Members will not ask for it again. Now the House rises......

Sri L. S. VENKAJI RAO (Basavangudi).—May I submit, Sir, that if the proposition is that lost time should not be sought for, then I do not think that we should agree to the proposal. Because there may be members who would like to speak.

Apart from that, the time lost in one way during the proceedings could not be recovered under any circumstances. Therefore, my submission to the Chair is that the Chair should reconsider the matter before giving its decision.

Mr. SPEAKER.—I only said that the members should not ask for the time lost—not that I am going to deprive the House of the time to which it is entitled. I was just thinking what time I should give to the Hon'ble Members. We may have to sit longer tomorrow. It does not matter. But supposing we lose half an hour in the process, we should not mind that. In that case, I will try to give as much time as possible tomorrow. The House will now rise and meet tomorrow at 8-30 A.M.

The House adjourned at Twenty Minutes past Six of the Clock to meet again at Thirty Minutes past Eight of the Clock on Saturday, the 21st September 1957.